Reg. No. M. 1550.

*If not delivered please return to*

"KODAGU" OFFICE MERCARA

# ಕೊಡಗು.

ಸರ್ವೇಷಾಂ ಭೂತದಯಯೈವ ವಿದ್ಯಾ ನೀತಿ ಪ್ರಯುಜ್ಯತೇ ಪ್ರಕೃತ್ಯೈವ ದೇಶಾನಾಂ ಸುಸ್ಥಿರಾ ರಾಜ ಸಂಪದಾ

ವಾರ್ಷಿಕಕ್ಕೆ ಚಂದಾ ರೂ. ೩—೪—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೭ | ಮಡಿಕೇರಿ, ಸನ್ ೧೯೩೭ನೇ ಇಸವಿ ಡಿಸಂಬರ್ ತಾರೀಕು ೩೦ ನೇ ಗುರುವಾರ. | ಸಂಚಿಕೆ ೫೦

SARI-PIN.

EAR-RINGS.
(Thodus)
Cut rubys Rs. 25 to 50
With diamond in centre Rs. 80 to 120

BRACELETS.
Gold Rs. 10
Set rubys forming any letter Rs. 12

NECKCHAINS.

NOSE-RINGS.
Diamond in small size of best quality Rs. 35
& upwards according to size.

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.
Silver Guindys, Photo lockets, Dimond nose-screws, cut-ruby ear-rings, etc., etc., etc., in all prices. Very attractive. Prices most moderate.

Estimates free on enquiry

Telegrams: 'PRECIOUS.'

CATALOGUE ON ENQUIRY.

Designs free on enquiry.

Telephone: 3145.

# V. Subramaniyer
## Jeweller,

Post Box 423, Triplicane, P. O., MADRAS.

52–5

ENO'S FRUIT SALT

ಉಪಯೋಗಿಸಿ ಮಲೇರಿಯಾಕ್ಕೆ ತುತ್ತಾಗುವದನ್ನು ತಪ್ಪಿಸಿಕೊಳ್ಳಿ. ಎಲ್ಲಾ ಮಲೇರಿಯಾ ಜ್ವರಗಳಿಗೂ ಇದು ಒಳ್ಳೇ ಮದ್ದು. ಇದು ಎಲ್ಲಾ ಮಲೇರಿಯ ಔಷಧಿಗಳಿಗಿಂತಲೂ ಒಳ್ಳೆಯದೆಂದು ಪ್ರಸಿದ್ಧ ಚಿಕಿತ್ಸೆಗಾರರು ಹೇಳಿದ್ದಾರೆ. ಹಳೇ ಜ್ವರಕ್ಕೂ ಒಳ್ಳೇ ಗುಣಕಾರಿ.

(ಇನೋಸ್ ಫ್ರೂಟ್ ಸಾಲ್ಟ್)

MALARIA

FOR

SOLE AGENTS
GORIO LTD.
P.O. BOX 159, BOMBAY

AVAILABLE AT ALL CHEMISTS

26–26

## ಎಂಪಯರ್ ಆಫ್ ಇಂಡಿಯಾ ಲೈಫ್ ಎಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪನೆಯಾದದ್ದು 1897.)

1934ನೇ ಇಸವಿ ಮಾರ್ಚ್ 1ನೇ ತಾರೀಕಿನೊಳಗೆ ಹಕ್ಕಾಗುವ ಪೋಲಿಸಿಗಳ ಮೇಲೆ ಇಂಟರಿಮ್ ಬೋನಸುಗಳು ವರ್ಷಕ್ಕೆ 1000ಕ್ಕೆ ರೂ. 16ರಂತೆ ಹೋಲ್ ಲೈಫ್ ಎಷ್ಯೂರೆನ್ಸಿನ ಮೇಲೆಯೂ

ಮತ್ತು

1000ಕ್ಕೆ ರೂ. 14ರಂತೆ ಎಂಡೋಮೆಂಟ್ ಎಷ್ಯೂರೆನ್ಸಿನ ಮೇಲೆಯೂ ಏರಿಸಲ್ಪಟ್ಟಿವೆ.

ಹೆಡ್ ಆಫೀಸು:—
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರಾಂಚ್ ಆಫೀಸು:—
152–3 ಕಮರ್ಷಲ್ ಸ್ಟ್ರೀಟ್,
ಬೆಂಗಳೂರು.

52–12

## ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಆ ಜ ವಿ ರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

| ವರ್ಷ | ಮೇಲ್ಪಟ್ಟ ವರ್ಷಾದಾಯ | ಮೇಲ್ಪಟ್ಟ ಮೂಲಧನ | ಖರ್ಚು ವಂಚನೆಯ ಶೇಕಡ |
|---|---|---|---|
| 1911 | 46,248 | 49,447 | 82.9 |
| 1921 | 2,92,627 | 6,53,350 | 43 2 |
| 1931 | 12,50,000 | 40,00 000 | 28.2 |

ಬೋನಸ್ಸು.

ಕುರ್ಚು ನಫೆ ದೊರಕುವ ಜೀವವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಜೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ಏನೆ ಮಾಡಿ ಕಂತೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರ ವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ವ್ಯಯೋಜನೆ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟಿಡೆಂಟ್,
ಮಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು.

52–35

ಕೊಡಗು.

ಸನ್ ೧೯೨೫ನೇ ಇಸವಿ

ಡಿಸೆಂಬರ್ ತಾ. ೩೦ನೇ ಶುಕ್ರವಾರ.

## ಪ್ರೆಸ್ ಆರ್ಡಿನೆನ್ಸ್

ಜಾರಿಯಲ್ಲಿರುವ ವರೆಗೆ

ನಾವು

ಪ್ರಕಟಿಸುವುದಿಲ್ಲ.

# ಕರ್ನಾಟಕ ಸಾಹಿತ್ಯ ಪರಿಷತ್ತಿನ ೧ಲನೇ ಅಧಿವೇಶನ.

### ಮೊದಲನೆಯ ದಿನ.

ಕರ್ನಾಟಕ ಸಾಹಿತ್ಯ ಸಮ್ಮೇಳನದ ಹದಿನೆಂಟನೆಯ ಅಧಿವೇಶನವು ಈ ತಾ. 28ರಲ್ಲಿ ಮಡಿಕೇರಿಯಲ್ಲಿ ಪ್ರಾರಂಭವಾಯಿತು. ಗೊತ್ತು ಮಾಡಲ್ಪಟ್ಟ ಸಮಯಕ್ಕೆ ಮುಂಚಿತವಾಗಿಯೇ, ಈ ಉದ್ದಿಶ್ಯ ಸೆಂಟ್ರಲ್ ಹೈಸ್ಕೂಲ್ ಕಾಂಪೌಂಡಿನಲ್ಲಿ ಹಾಕಲ್ಪಟ್ಟಿದ್ದ ಸುಂದರವಾದ ಚಪ್ಪರದಲ್ಲಿ ಜನರು ಕಿಕ್ಕಿರಿದು ನೆರೆದಿದ್ದರು. ಚಪ್ಪರದೊಳಗೆ ಪ್ರವೇಶವು ಟಿಕೇಟುಗಳ ಮೂಲಕವಾಗಿತ್ತು. ಪ್ರತಿನಿಧಿಗಳಿಗೆ 1 ರೂ. ಯೂ, ಪ್ರೇಕ್ಷಕರಿಗೆ 8 ಆಣೆಯೂ ಟಿಕೇಟು ಚಾರ್ಜು ಇಡಲ್ಪಟ್ಟಿದ್ದರೂ ಚಪ್ಪರವು ಹಿಡಿಯಲಾರದಷ್ಟು ಜನರು ಸೇರಿದ್ದರು. ಸುಮಾರು 450 ಪ್ರತಿನಿಧಿಗಳೂ, ಸುಮಾರು 550 ಪ್ರೇಕ್ಷಕರೂ ಮತ್ತು 100 ಸ್ವಾಗತ ಮಂಡಳಿಯವರೂ ಕೂಡಿ 1000ಕ್ಕಿಂತ ಹೆಚ್ಚು ಜನರು ನೆರೆದಿದ್ದರು. ಸ್ತ್ರೀಯರ ಸಂಖ್ಯೆಯು 200ಕ್ಕಿಂತ ವಿರಳ. ಪ್ರತಿನಿಧಿಗಳ ಪೈಕಿ ಸುಮಾರು 120 ಜನರು ಮೈಸೂರು, ದಕ್ಷಿಣ ಕನ್ನಡ, ಉತ್ತರ ಕರ್ನಾಟಕ, ನೈಜಾಮ ಕರ್ನಾಟಕ ಮೊದಲಾದ ಹೊರಪ್ರಾಂತ್ಯಗಳಿಂದ ಬಂದವರಾಗಿದ್ದರು

ಬೆಳಿಗ್ಗೆ 9½ ಗಂಟೆಗೆ ಸರಿಯಾಗಿ, ಅಧಿವೇಶನದ ಅಧ್ಯಕ್ಷ ಪದವಿಗೆ ಆರಿಸಲ್ಪಟ್ಟಿದ್ದ ಬೆಂಗಳೂರಿನ ಶ್ರೀಯುತ ಡಿ. ವಿ. ಗುಂಡಪ್ಪನವರನ್ನು ಸ್ವಾಗತ ಮಂಡಳಿಯವರು ಅಧ್ಯಕ್ಷರ ಶಿಬಿರವಾದ ಮೋಡಲ್ ಸ್ಕೂಲಿನ ಕಟ್ಟಡದಿಂದ ವ್ಯೂನ್ಸ್ ಕಾಂಪೌಂಡಿನ ರಸ್ತೆಗಾಗಿ ಬಂದು ಹೈಸ್ಕೂಲಿನ ಹಿಬ್ಬಾಗಿಲಿಗಾಗಿ ದಾಟಿ ಚಪ್ಪರಕ್ಕೆ ಮೆರವಣಿಗೆಯಲ್ಲಿ ಕರೆತಂದರು. ಎಲ್ಲರೂ ಕುಳಿತುಕೊಂಡ ಮೇಲೆ ಮೈ. ಜೆ. ಶ್ರೀನಿವಾಸಮೂರ್ತಿಯವರಿಂದ ರಚಿಸಲ್ಪಟ್ಟ ಸ್ವಾಗತ ಗೀತೆಯನ್ನು ಮೂರು ಹೆಣ್ಣು ಮಕ್ಕಳು ಬಹು ಇಂಪಾಗಿ ಹಾಡಿದರು. (ಈ ಗೀತೆಯು ಇನ್ನೊಂದು ಕಡೆ ಪ್ರಕಟಿಸಲ್ಪಟ್ಟಿದೆ)

ನಂತರ ಸ್ವಾಗತ ಕಮಿಟಿಯ ಅಧ್ಯಕ್ಷರಾದ ಮೈ. ಕೋದಂಡ ಯಂ. ದೇವಯ್ಯನವರು ತಮ್ಮ ಸ್ವಾರಸ್ಯವಾದ ಸ್ವಾಗತ ಭಾಷಣವನ್ನು ಓದಿದರು. ಆ ಸಮಯದಲ್ಲಿ ಈ ಭಾಷಣದ ಅಚ್ಚಾದ ಪ್ರತಿಗಳು ಜನರಲ್ಲಿ ಹಂಚಲ್ಪಟ್ಟವು. (ಈ ಭಾಷಣವೂ ಬೇರೊಂದು ಕಡೆ ಕೊಡಲಾಗಿದೆ.) ಇದಾದ ಕೂಡಲೆ ಮೈ. ಬಿದ್ದಂಡ ಕುಶಾಲಪ್ಪನವರು ಚಿಕ್ಕ ಭಾಷಣದಿಂದ ಶ್ರೀಯುತ ಡಿ. ವಿ. ಗುಂಡಪ್ಪನವರನ್ನು ಅಧ್ಯಕ್ಷ ಪದವಿಗೆ ಸೂಚಿಸಿದರು. ರಾ. ಬಾ. ಪಟ್ಟಮಾಡ ದೇವಯ್ಯನವರು ಅನುಮೋದಿಸಿದರು. ಬೆಂಗಳೂರಿನ ಮೈ. ಯಂ. ವೆಂಕಟೇಶಯ್ಯಂಗಾರವರು, ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನ ಅಧ್ಯಕ್ಷರಾದ ವೈ. ವಿ. ವೆಂಕಟಪ್ಪನವರು, ಧಾರವಾಡದ ಮೈ. ವೆಂಕಟೇಶ ನಾರಾಯಣ ಕುರ್ಡಿಯವರು, ನೈಜಾಮ ಕರ್ನಾಟಕದ ಬಾವುಶಾಸ್ತ್ರಿಯವರು, ಮೈ ಗುಂಡಪ್ಪನವರ ಗುಣಕಥನ ಮಾಡಿ ಸೂಚನೆಯನ್ನು ಪುಷ್ಟೀಕರಿಸಿದರು ಮೈ ಗುಂಡಪ್ಪನವರು ಸಭಿಕರ ಕೈಚಪ್ಪಾಳೆಗಳ ಘೋಷದ ಮಧ್ಯ, ತನಗೆ ಕೊಟ್ಟ ವಿಶೇಷವಾದ ಗೌರವಕ್ಕಾಗಿ ಸಭಿಕರನ್ನು ವಂದಿಸಿ, ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು.

ಪರಿಷತ್ತಿನ ಕಾರ್ಯದರ್ಶಿಗಳಾದ ಬೆಂಗಳೂರಿನ ಮೈ. ವೆಂಕಟರಾಮಯ್ಯನವರು ಪರಿಷತ್ತಿನ ಕಳೆದ ವರ್ಷದ ವಂದಿಯನ್ನು ಓದಿ ಹೇಳಿದರು. ಸುಮಾರು ಒಂದೂವರೆಕೋಟಿ ಕನ್ನಡಿಗರ ಪೈಕಿ ಕಳೆದ 18 ವರ್ಷಗಳಿಂದ ಶ್ರಮಪಡುತ್ತಿರುವ ಈ ಪರಿಷತ್ತಿಗೆ ಬಹು ಸ್ವಲ್ಪ ಮಂದಿ ಮಾತ್ರ ಸದಸ್ಯರಾಗಿರುವುದೂ, ಅಪರ ಪೈಕಿಯೂ ಹಲವರು ತಮ್ಮ ಚಂದಾವನ್ನು ಪಾವತಿ ಮಾಡದಿರುವದೂ ವ್ಯಸನಕರವೆಂದೂ, ಇನ್ನಾದರೂ ಕನ್ನಡಿಗರು ತಮ್ಮ ಸಾಹಿತ್ಯವನ್ನು ವೃದ್ಧಿಗೊಳಿಸಲು ಮುಂದೆ ಒಂಬೇಕೆಂದೂ ಮೊದಲಾದ ಅಪ್ಪೀಲಿನಿಂದ ವಂದಿಯು ಅಂತ್ಯಗೊಳಿಸಲ್ಪಟ್ಟಿತು. ಆ ಮೇಲೆ ಸ್ವಾಗತಮಂಡಳಿಯ ಒಬ್ಬ ಕಾರ್ಯದರ್ಶಿಯಾದ ಮೈ. ಸಿ. ಯಂ. ರಾಮರಾಯರು ಪರಿಷತ್ತಿನ ಅಧಿವೇಶನಕ್ಕೆ ಜಯವನ್ನು ಹಾರೈಸಿ ಕಳುಹಿಸಿದ ಮೈಸೂರು ಮಹಾರಾಜರ ಪ್ರೈವೇಟ್ ಸೆಕ್ರೆಟರಿಯಾದ ಮೈ. ಟಾಡ್ ಹಂಟರ್, ಕೋಲಾರ ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟರಾದ ಮೈ. ರೆಡ್ಡಿಯವರು, ಮಹಾರಾಷ್ಟ್ರ ಸಾಹಿತ್ಯಸಮ್ಮೇಳನದ ಸೆಕ್ರೆಟರಿಯವರು, ಮೈ. ಪಿ. ಮಂಗೇಶರಾಯರು, ಮೈ. ಯಂ. ಆರ್. ಸುಬ್ಬಣಯ್ಯನವರು, ವಿಶ್ವಕರ್ನಾಟಕ ಪತ್ರಿಕೆಯ ಮೈ. ಟಿ ಶರ್ಮರವರು, ಬೆಂಗಳೂರಿನ ಮೈ. ಪುಟ್ಟಣ್ಣ ಶೆಟ್ಟಿಯವರೇ ಮೊದಲಾದ ಅನೇಕ ಮಹನೀಯರ ತಂತೀಗಳನ್ನೂ, ಪತ್ರಗಳನ್ನೂ ಓದಿದರು.

ಕೂಡಲೇ ಅಧ್ಯಕ್ಷರು ತಮ್ಮ ಅರ್ಥಗರ್ಭಿತವೂ, ರಸಭರಿತವೂ ಆದ ದೀರ್ಘಭಾಷಣವನ್ನು ಗಂಭೀರವಾದ ಸ್ವರದಿಂದ ಎಲ್ಲರಿಗೂ ಕೇಳಿಸುವಂತೆ ಓದಿದರು. (ಇದನ್ನು ಬಗುವ ವಾರ ಪ್ರಕಟಿಸಲಾಗುವುದು.) ಭಾಷಣವಾಗುತ್ತಿದ್ದಾಗ್ಯೆ ಸಭಿಕರು ಆಗಾಗ್ಯೆ ಕೈಚಪ್ಪಾಳೆಗಳಿಂದ ತಮ್ಮ ಮೆಚ್ಚುಗೆಯನ್ನು ತೋರಿಸುತ್ತಿದ್ದರು.

ಶ್ರೀಮತಿ ಪಾಲೇಕಂಡ ಮೇದಪ್ಪ ಪೂವಮ್ಮನವರು ತಮ್ಮ ಚಿಕ್ಕ ಭಾಷಣವನ್ನು ಓದಿ, ಸಾಹಿತ್ಯದ ಪ್ರದರ್ಶನವನ್ನು ತೆರೆದರು. ಪ್ರದರ್ಶನವು ಹೈಸ್ಕೂಲಿನ ಒಂದು ಕೋಣೆಯಲ್ಲಿ ಏರ್ಪಡಿಸಲಾಗಿತ್ತು. ಇದರಲ್ಲಿ ಕೊಡಗು ದೇಶದಲ್ಲಿ ದೊರೆತ ಸಾಹಿತ್ಯ ಸಂಬಂಧದ ತಾಳೆಗರಿ ಕಟ್ಟುಗಳೂ, ಕೈಬರಹದ ವಹಿಗಳೂ, ಪುರಾತನ ಕಾಲದ ಕೊಡವರ ಶೌರ್ಯವನ್ನು ತೋರುವ ಉಡುಪು ತೊಡಪುಗಳೂ, ಕೋವಿಕತ್ತಿಗಳೂ, ಕೊಡಗು ದೇಶಸ್ಥರಿಂದಲೇ ಚಿತ್ರಿಸಲ್ಪಟ್ಟ ಲಲಿತಕಲೆಯ ಅಂದವಾದ ಚಿತ್ರಗಳೂ ಇಡಲ್ಪಟ್ಟಿದ್ದವು.

ಮಧ್ಯಾಹ್ನದ ಮೇಲೆ 4 ಗಂಟೆ ಸಮಯದಲ್ಲಿ ಸಭೆಯು ಪುನಃ ಸೇರಿತು. ಕೊಡಗಿನ ಹಲವು ಬರೆಹಗಾರರ ಲೇಖನಗಳಿಂದ ಕೂಡಿದ 'ಕೊಡಗಿನ ಕಾಣಿಕೆ' ಎಂಬ ಪುಸ್ತಕದ ಪ್ರತಿಗಳನ್ನು ಸಭಿಕರ ಅಪ್ಪಣೆಯಿಂದ ಮೈ. ಆತ್ಮರಾಮಶಾಸ್ತ್ರಿಯವರು ಸಭೆಯ ಅಧ್ಯಕ್ಷರಿಗೂ, ಪರಿಷತ್ತಿನ ಕಾರ್ಯದರ್ಶಿಯವರಿಗೂ ಒಪ್ಪಿಸಿದರು. ನಂತರ ವಿಷಯನಿಯಾಮಕ ಸಮಿತಿಯ ಸದಸ್ಯರ ಹೆಸರಾವಣೆಯಾಯಿತು. ಒಟ್ಟು 25 ಮೆಂಬರುಗಳು ಆರಿಸಲ್ಪಟ್ಟರು. ಇದಾದ ಮೇಲೆ ಮೈ. ನಾರಾಯಣಬಾ ಪುಶಾಸ್ತ್ರಿಯವರು ಕನ್ನಡದ ಅತೀ ಪುರಾತನ ಕವಿಯಾದ ನೃಪತುಂಗನ ಕವಿತೆಯ ಆಧಾರದ ಮೇಲೆ ಕೊಪ್ಪಣ ನಗರದ ಚರಿತ್ರೆ ದೃಷ್ಟಿಯಿಂದ ಮಾಡಿದ ಸಂಶೋಧನೆಯನ್ನು ಕುರಿತ ಪ್ರಬಂಧವನ್ನೂ, ಮಂಗಳೂರಿನ ಶೇಡ್ಯಾಪು ಕೃಷ್ಣಭಟ್ಟರವರು ಛಂದಸ್ಸನ್ನು ಕುರಿತ ಪ್ರಬಂಧವನ್ನೂ ಓದಿದರು ಪುತ್ತೂರಿನ ವೇದಾಂತ ಶಿರೋಮಣಿ ಶಂಭು ಶಾಸ್ತ್ರಿಯವರು ಪುರಾತನ ಕವಿಗಳ ರೀತಿಯನ್ನು ಹೊಗಳಿಯೂ, ಆಧುನಿಕ ಕವಿಗಳ ರೀತಿಯನ್ನು ಖಂಡಿಸಿಯೂ ಉಪನ್ಯಾಸ ಮಾಡಿದರು. ಇವರ ಅಭಿಪ್ರಾಯವನ್ನು ಪ್ರತಿಭಟಿಸಿ ವೈ. ಯಂ. ವೆಂಕಟೇಶಯ್ಯಂಗಾರರು, ಮೈ. ವೆಂಕಟರಾಮಯ್ಯನವರೇ ಮೊದಲಾದವರು ಮಾತಾಡಿದರು.

ರಾತ್ರಿ 7 ರಿಂದ 7½ ಗಂಟೆಯ ವರೆಗೆ ಬೋರ್ಡಿಂಗಿನ ಅಂಗಳದಲ್ಲಿ ಕೊಡಗರ ಬೊಳಕಾಟ ಮತ್ತು ಕೋಲಾಟವು ವಿದ್ಯಾರ್ಥಿಗಳಿಂದ ಪ್ರದರ್ಶಿಸಲ್ಪಟ್ಟಿತು. ಗಂಟೆ 9½ ಯಿಂದ 11 ರ ವರೆಗೆ "ಬೊಗ್ಗು" ಮತ್ತು "ಇಬ್ಬರೂ ಘಾಟಿಗಳೇ!" ಎಂಬ ಪ್ರಹಸನಗಳು ಚಪ್ಪರದಲ್ಲಿ ಆಡಿ ತೋರಿಸಲ್ಪಟ್ಟವು.

### ಎರಡನೆಯ ದಿನ.

ಬೆಳಿಗ್ಗೆ 9ರಿಂದ 10½ ಗಂಟೆಯ ವರೆಗೆ ವಿಷಯ ನಿಯಾಮಕ ಮಂಡಳಿಯ ವಿಂಟಿಂಗು ಚಪ್ಪರದಲ್ಲಿ ನಡೆಯಿತು.

### ಕವಿ ಸಮ್ಮೇಲನ.

ಈ ಸಮ್ಮೇಳನಕ್ಕೆ ಮಂಗಳೂರಿನ 'ರಾಷ್ಟ್ರ ಬಂಧು' ಎಂಬ ಪತ್ರಿಕೆಯ ಸಂಪಾದಕರೂ, 'ಕಾಣಿಕೆ', 'ನಲ್ಮೆ' ಮುಂತಾದ ಕವನ ಕೋಶಗಳ ಕರ್ತೃಗಳೂ ಆದ ಶ್ರೀಯುತ ಕಡೆಂಗೋಡ್ಲು ಶಂಕರಭಟ್ಟರು ಅಧ್ಯಕ್ಷರಾಗಿದ್ದರು. ಅಧ್ಯಕ್ಷರು ಭಾಷಣವನ್ನು ಓದಿದನಂತರ ಕರ್ನಾಟಕದ ನಾನಾ ಕಡೆಯ ತರುಣ ಕವಿಗಳು ತಮ್ಮ ಕವನಗಳನ್ನು ಓದಿದರು. ಹೀಗೆ ಓದಿದವರ ಪೈಕಿ ಮುಡಿಕೇರಿಯ ಮೈ. ಅಜ್ಜಮಾಡ ಬೋಪಯ್ಯನವರು, ಮೈ. ನ. ಚಿ ಸುಬ್ಬಯ್ಯನವರು ಮತ್ತು ಮೈ. ಟಿ. ಯಂ. ಕಾರ್ಯಪ್ಪನವರು, ಧಾರವಾಡ ಗೆಳೆಯರ ಗುಂಪಿನ ಮೈ. ಪ್ರಹ್ಲಾದರವರು ಮೈ. ಸಾಲಿ ರಾವುಜಂದ್ರರಾಯರ 'ಕೊಡಗು' ಮೈ ಬೇಂದ್ರೆಯವರ 'ಕುಣಿಯೋಣ ಬಾರಾ' ಮತ್ತು ಠಾಕೂರವರ ಒಂದು ಅನುವಾದವನ್ನೂ ಬಹು ಸ್ವಾರಸ್ಯವಾಗಿ ಓದಿದರು.

### ಪರಿಷತ್ತಿನಲ್ಲಿ ಒಂದು ದಸ್ಯಗಿರಿ!

ಮಲೆನಾಡಿನ ಕೋಗಿಲೆಯೆಂದು ಪ್ರಸಿದ್ಧಿ ಪಡೆದ ಶ್ರೀಮಾನ್ ಕೆ. ವಿ. ಪುಟ್ಟಪ್ಪನವರು ತಮ್ಮ 'ನವೀನ ಭಾರತ' 'ತಪಸ್ವಿನಿ' 'ಮಲೆನಾಡಿನ ಕೋಗಿಲೆ' ಎಂಬ ಮೂರು ಕವಿತೆಗಳನ್ನು ಸರ್ವರೂ ಮೆಚ್ಚುವಂತೆ ಹೇಳಿದರು. ಸಭಿಕರು ತಮ್ಮ ಮೆಚ್ಚುಗೆಯನ್ನು ಕೈ ಚಪ್ಪಾಳೆಗಳ ಮೂಲಕ ತೋರಿಸುತ್ತಿದ್ದಾಗ್ಯೆ ಉತ್ಸಾಹ ಭರಿತರಾಗಿದ್ದ ಶನಿವಾರಸಂತೆಯ ಮೈ. ಬಿದರೂರು ಮಾದಯ್ಯನವರು ಮಹಾತ್ಮಗಾಂಧಿಯವರ ಮತ್ತು ಕರ್ನಾಟಕ ಮಾತೆಯ ಹೆಸರುಗಳನ್ನೆತ್ತಿ ಜಯಘೋಷ ಮಾಡಿ ಪೊಲೀಸರ ದೃಷ್ಟಿಗೆ ಬಿದ್ದರು. ಆಗ ಜನಸ್ತೋಮವು ದೊಡ್ಡದಾಗಿದ್ದುದರಿಂದಲೋ ಏನೋ ಪೊಲೀಸರವರು ಸುಮ್ಮನಿದ್ದು ಸಭೆಯು ಮಧ್ಯಾಹ್ನ ಊಟಕ್ಕೆ ನಿಲ್ಲಿಸಲ್ಪಟ್ಟ ಜನರು ಹೊರಟು ಹೋದ ಮೇಲೆ ಮೈ. ಮಾದಯ್ಯನವರನ್ನು ದಸ್ತಗಿರಿ ಮಾಡಿ ಪೊಲೀಸು ಠಾಣ್ಯಕ್ಕೆ ಕರೆಸಿಯ್ದರಂದೂ, ಅಲ್ಲಿಂದ ಅವರನ್ನು ಸ್ವಲ್ಪ ಸಮಯದನಂತರ ಅಪರ ಪುನಃ ಕಳುಹಿಸಿಬಿಟ್ಟರೆಂತಲೂ ವರ್ತಮಾನ.

ತದನಂತರ ಮಂಗಳೂರಿನ ಮೈ. ಕೆ. ಕೃಷ್ಣಭಟ್ಟರು, ತಾವು ಸಂಗ್ರಹಿಸಿದ ಕೆಲವು ಹೆಂಗಸರಂಪದಗಳನ್ನು ಹಾಡಿದುದಲ್ಲದೆ ಅಧ್ಯಕ್ಷರು ಬರೆದ 'ಸಂಧ್ಯಾಟೀಕೆ' ಎಂಬ ಕವನದಿಂದ ಕೆಲವು ಭಾಗಗಳನ್ನು ಓದಿದರು. ಮೈಸೂರಿನ ಮೈ. ತೀ. ನಂ. ಶ್ರೀಕಂಠಯ್ಯನವರು ಹೊಸದಾಗಿ ಪ್ರಕಟಿಸಲಿರುವ ತಮ್ಮ 'ಒಲುಮೆ' ಎಂಬ ಪ್ರೇಮ ಗೀತೆಗಳ ಕೋಶದಿಂದ ಮೂರು ಕವನಗಳನ್ನು ಓದಿದರು. ಮೈ. ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರವರು ಸಭಿಕರ ಕೋರಿಕೆಯ ಮೇರೆ ತಮ್ಮ 'ಜೇನುವು' ನಿಂದ "ನೀಲಗಾರ ಮೂದಣ್ಣ" ವ ತ್ತು 'ಮಲ್ಲಮ್ಮ' ಎಂಬ ಕವಿತೆಗಳನ್ನು ಹಾಡಿ ತೋರಿಸಿದರು. ಕಡೆಯಲ್ಲಿ ಮೈ. ಸಂಪತ್ಕುಮಾರಾಚಾರ್ಯರವರು ಅಲ್ಲಿ ನೆರೆದಿದ್ದವರ ಅಭಿಪ್ರಾಯಾನುಸಾರ ಶ್ರೀ. ಡಿ. ವಿ. ಗುಂಡಪ್ಪನವರ 'ಕೊಡಗಿನ ಬೆಡಗು' ನ್ನು ಹಾಡಿದರು. ಹೊತ್ತು ಆಗಲೇ ಬಹಳವಾಗಿದ್ದುದರಿಂದ ಸಮ್ಮೇಳನವನ್ನು ನಿಲ್ಲಿಸಿ ಊಟಕ್ಕೆ ತೆಳಿದರು.

(4ನೇ ಪುಟದಲ್ಲಿ ಮುಂದುವರಿದಿದೆ.)

# ಕರ್ನಾಟಕ ಸಾಹಿತ್ಯ ಸಮ್ಮೇಲನ.
## ೧೮ನೇಯ ಅಧಿವೇಶನ.

### ಸ್ವಾಗತ ಮಂಡಲದ ಅಧ್ಯಕ್ಷರಾದ
### ಮೆ. ಕೋದಂಡ ದೇವಯ್ಯನವರ ಭಾಷಣ.

ರ್ನಾಟಕ ಸಾಹಿತ್ಯಪ್ರೇಮಿಗಳಾದ ಪ್ರತಿನಿಧಿಗಳಿರಾ,

ತಾಯಿನುಡಿಯ ಹಬ್ಬವನ್ನು ಜರುಗಿಸಲು ಕನ್ನಡನಾಡಿ ಬೇರೆ ಬೇರೆ ಕಡೆಗಳಿಂದ ಬಂದಿರುವ ತಮ್ಮೆಲ್ಲರಿಗೆ ನಾನು ಹೊತ್ತು ಹೃತ್‌ಪೂರ್ವಕವಾಗಿ ಸ್ವಾಗತವನ್ನೀಯುತ್ತೇನೆ. ಸಾಹಿತ್ಯ ಸಮ್ಮೇಳನಕ್ಕೆ ಕೊಡಗಿನ ಪರವಾಗಿ ಈ ಮೊದಲೆ ಆಹ್ವಾನವು ಕೊಡಲ್ಪಟ್ಟಿತು. ಆದರೆ ಆ ಆಹ್ವಾನವನ್ನು ಪೂರೈಸುವ ಸಂಯೋಗವು ಇದು ವರೆಗೆ ಬಂದಿರಲಿಲ್ಲ. ಈ ವಿಷಯವನ್ನು ಕುರಿತು ಕರ್ನಾಟಕ ಸಾಹಿತ್ಯ ಪರಿಷತ್ತಿನ ವಿಭಾಗ ಹಿಂದಿನ ವರ್ಷದ ಸರದಿಯಲ್ಲಿ ಮುಂದಿನ ಮಾತುಗಳು ಇವೆ:—"ಕರ್ನಾಟಕ ಸಾಹಿತ್ಯ ಸಮ್ಮೇಳನವು ಮೈಸೂರು ಸಂಸ್ಥಾನದಲ್ಲಿ ಎರಡು ಸಲವೂ, ಮುಂಬಯಿ ಕರ್ನಾಟಕದಲ್ಲಿ ಮೂರು ಬಾರಿಯೂ, ಮದ್ರಾಸು ಕರ್ನಾಟಕದಲ್ಲಿ ಮೂರಾವೃತ್ತಿಯೂ ಕೂಡಿರುತ್ತದೆ. ನಿಜಾಂ ಕರ್ನಾಟಕ, ಮುಂಬಯಿ, ಉತ್ತರ ಕನ್ನಡ ಜಿಲ್ಲೆ, ಕೊಡಗು ಸೀಮೆ—ಈ ಪ್ರಾಂತಗಳಲ್ಲಿ ಸಮ್ಮೇಳನವು ಕೂಡಲು ಇದು ವರೆಗೆ ಅವಕಾಶ ದೊರೆಯಲಿಲ್ಲ." ಈ ರೀತಿಯಿಂದ ಉಪಕ್ರಮದ ಮಾತುಗಳಿದ್ದು ಅನಂತರ ಕಲ್ಬುರ್ಗೆಯವರು ಸಮ್ಮೇಳನವನ್ನು ಕರೆದದಕ್ಕಾಗಿ ಅವರಿಗೆ ಧನ್ಯವಾದವನ್ನು ಸಮರ್ಪಿಸಿ ಮುಂದಿನ ಸರದಿಯಲ್ಲಿ ಬರೆದಿರುವುದೇನೆಂದರೆ—"ಮುಂದಣ ಎಂಡು ವರ್ಷಗಳಲ್ಲಿ ಸಮ್ಮೇಳನವು ಊರಿದಿರವ ಮುಂಬಯಿ ಉತ್ತರ ಕನ್ನಡ ಜಿಲ್ಲೆಯಲ್ಲಿಯೂ, ಕೊಡಗು ಸೀಮೆಯಲ್ಲಿಯೂ ಅಲ್ಲಿಯ ಭಾಷಾಭಿಮಾನಿಗಳ ಉತ್ಸಾಹೌದಾರ್ಯಗಳಿಂದ ನಡೆಯುವ ಪಕ್ಷಕ್ಕೆ ಕರ್ನಾಟಕ ಮಂಡಲದ ಮುಂಬಯಿ ಪ್ರದೇಶಗಳಲ್ಲಿ ಕರ್ನಾಟಕ ಸಾಹಿತ್ಯ ಸಮ್ಮೇಳನದ ಪರಿಚಾರನವು ಒರಸು ಸಾರಿ ಮುಂಗಿದಂತಾಯಿಕು." ಕೊಡಲೆ ಪುರಿದೆ "ಈ ಸಾರಿ (೧೯೩೦ನೆಯ ಇಸವಿಯಲ್ಲಿ) ಕರ್ನಾಟಕ ಸಾಹಿತ್ಯ ಸಮ್ಮೇಳನವನ್ನು ಕೊಡಗು ಸಾಂತಕ್ಕೆ ರಾಜಧಾನಿಯೂದ ಮಡಿಕೇರಿಯಲ್ಲಿ ನೆರೆಯಿಸಬೇಕೆಂದು ಅಲ್ಲಿಯ ಪ್ರಮುಖರು ಕೆಲವು ಮಾಡಿದ ಪ್ರಯತ್ನವು ಹಲವು ಕಾರಣಗಳಿಂದ ಫಲಿಸಲಿಲ್ಲ." ವರದಿಯಲ್ಲಿ ಸೂಚಿಸಿದ ಪ್ರೇರಣೆಗೆ ಹಿಂದೆಯೇ ಈ ಸಮ್ಮೇಳನವನ್ನು ಇಲ್ಲಿ ಜರುಗಿಸಲು ಯಾವ ಹಲವು ಕಾರಣಗಳಿಂದ ಸಾಧ್ಯವಾಗಲಿಲ್ಲವೋ ಆ ಕಾರಣಗಳು ಈ ಹೊತ್ತಾದರೂ ಕಡಿಮೆಯಾಗಿವೆ ಎಂದಲ್ಲ. ಮಾತ್ರವಲ್ಲ, ಆರ್ಥಿಕ ದೃಷ್ಟಿಯಿಂದ ಉತ್ಸನ್ನವಾದ ಜಾಗೃತಿಕಾದುರವಸ್ಥೆಯು ನಮ್ಮ ಕೊಡಗು ಸೀಮೆಯನ್ನೇನಾದರೂ ಬಿಟ್ಟಿಲ್ಲ. ಎಂದ ಮೇಲೆ ಮೊದಲಿಗಿಂತಲೂ ಈಗ ಅಡಚಣೆಗಳೆ ಹೆಚ್ಚು. ಆದರೆ ಈ ಸಾರಿ ಸಾಹಿತ್ಯ ದೇವಿಯು ಅನುಗ್ರಹದಿಂದಲೊ, ಪರಿಷತ್ತಿನ ಮನಃಶಕ್ತಿಯ ಪ್ರಭಾವದಿಂದಲೊ, ಇಲ್ಲವೆ ನಮ್ಮಲ್ಲಿ ಉಂಟಾದ ಕರ್ತವ್ಯದ ಅರಿವಿನಿಂದಲೊ ತಮ್ಮನ್ನು ಭಾವೂಡಿಕೊಳ್ಳುವ ಸುಸಂದರ್ಭವನ್ನು ಒದಗಿಸಿಕೊಂಡಿದ್ದೇವೆ. ಒದಗಿರುವ ಈ ಸುಸಂದರ್ಭವು ಯಶಸ್ವಿಯೊಗುವಂತೆ ನಮ್ಮ ಸ್ವಾಗತ ಮಂಡಲವು ಯಥಾಶಕ್ತಿ ಯತ್ನಿಸುತ್ತಿದೆ. ಅವರು ತಾವು ಇದು ವರೆಗೆ ಮೈಸೂರಿನಂತಹ ರಾಜಧಾನಿಯು, ಬೆಂಗಳೂರು, ಧಾರವಾಡಗಳಂತಹ ದೊಡ್ಡ ದೊಡ್ಡ ಪಟ್ಟಣಗಳ ಆದರಾತಿಥ್ಯವನ್ನು ಅನುಭವಿಸಿದವರು. ಕುದುರೆಯ ವಾಹನ, ಮೋಟಾರುಗಳಂತಹ ರಥಗಳಲ್ಲಿಯ ಸಂಚಾರ, ರುಚಿಕರವಾದ ಪಕ್ವಾನ್ನಗಳ ಊಟ ಉಪಚಾರ, ವಿದ್ಯುದ್ದೀಪದ ಪ್ರಕಾಶ ಇವೆ ಮೊದಲಾದ ಸಮೃದ್ಧಸಾಧನಗಳು ಒಂದೆಡೆ; ಪತ್ರಿಕಾ—ಗ್ರಂಥಗಳ ವಾಚನ ಮಂದಿರ, ವಿದ್ಯಾಪೀಠ, ಕವಿಸಮಾಜ ಇವೆ ಮುಂತಾದ ವಿದ್ಯಾಸಾಧನಗಳು ಇನ್ನೊಂದೆಡೆ; ಈ ಮೇರೆಗೆ ಲಕ್ಷ್ಮಿ ಮತ್ತು ಸರಸ್ವತಿಯ ಅನುಗ್ರಹವನ್ನು ಮೇಲಿನ ಪಟ್ಟಣಗಳಲ್ಲಿ ತಾವು ಇದು ವರೆಗೆ ಪಡೆದವರು. ಅವರಿ ಅಂತಹದೊಂದೂ ಸೌಗತಿಯು ನಮ್ಮಲ್ಲಿ ಇಲ್ಲವಾದುದರಿಂದ ತಮ್ಮಗಳಿಗೆ ನಮ್ಮ ಆತಿಥ್ಯೋಪಚಾರಗಳೆಂದರೆ ಇನ್ನೊಂದರ್ಥದಲ್ಲಿ ಉಪವಾಸಂವೆ ಸರಿ. ಭಗವಂತನಿಗೆ ವೈಭವದಿಂದ ತುಂಬಿ ತುಳುಕುತ್ತಿರುವ ಯುಧಿಷ್ಠಿರನ ಅರಮನೆಯಲ್ಲಿ ಇರುವಷ್ಟೆ ಆತೀಯ ಭಾವವು ಕುಚೇಲನ ಗುಡಿಸಲಿನಲ್ಲಿಯೂ ಇತ್ತಲ್ಲವೇ? ಹಾಗೆಯೆ ಕನ್ನಡತಾಯಿಯು ಕೂಡ ಐಶ್ವರ್ಯದಿಂದ ಮತ್ತು ವಿದ್ಯೆಯಿಂದ ಕೂಡಿದ ಇತರ ಕಡೆಗಳಲ್ಲಿಯ ಮಹೋತ್ಸವಗಳಲ್ಲಿ ಆನಂದಪಟ್ಟಂತೆ ಇಲ್ಲಿಯ ನಮ್ಮ ಚಿಕ್ಕ ಹಬ್ಬದೊಳಗಿನ ಬಡ ಆತಿಥ್ಯದಿಂದಲೂ ಸಂತುಷ್ಟಳಾಗಳಾರಳೆಂದು ಕೇಳಿಕೊಂಡಿರುವೆ ಅದು ತಪ್ಪಾಗಲಾರದು.

ನಮ್ಮ ಕೊಡಗು ಸೀಮೆಯು ಅಂದವಾದ ಗಿರಿತಿಬ್ಬಿಗಳಿಂದಲೂ, ಹಸುರಾದ ವನಶ್ರೀಯಿಂದಲೂ, ಸ್ವಚ್ಛವಾದ ಚಿಕ್ಕ ಚಿಕ್ಕ ಬುಗ್ಗೆಗಳಿಂದಲೂ ಪ್ರೇಕ್ಷಕರ ಕಣ್ಣನ್ನು ಆಕರ್ಷಿಸುತ್ತಿರುವಾಗ ತನ್ನ ಪುರಾಣ ಮತ್ತು ಇತಿಹಾಸಗಳಿಂದ ಭಕ್ತರ ಮತ್ತು ಜಿಜ್ಞಾಸುಗಳ ಮನಸ್ಸನ್ನು ಎಳೆಯುತ್ತಿರುವುದು. ದಕ್ಷಿಣ ಹಿಂದೂಸ್ಥಾನದಲ್ಲಿ ಆರ್ಯರೆ ಮೊದಲನೆಯ ವಸತಿಯನ್ನು ಕಲ್ಪಿಸಿದ ಅಗಸ್ತ್ಯಮುನಿಯ ಆಶ್ರಮವೂ, ಮಹಾನದಿಗಳಲ್ಲೊಂದಾದ ಕಾವೇರಿಯ ಉದ್ಭವವೂ, ಬ್ರಹ್ಮಗಿರಿಯ ಸಾನ್ನಿಧ್ಯವೂ, ಭಗಂಡ ಕ್ಷೇತ್ರವೂ, ಲಕ್ಷ್ಮಣ ತೀರ್ಥವೂ ಈ ದೇಶವನ್ನು ಪಾವನಗೊಡುವಂತೆ ಎಂಡು ಶತಮಾನಗಳ ವರೆಗೆ ಆಳಿದ ವೀರರಾಜರ ವಂಶದ ಆಳಿಕೆಯು ಕನ್ನಡಿಗರ ಇತಿಹಾಸ ಪ್ರಸಿದ್ಧವೇಶವನ್ನು ಉಜ್ವಲವನ್ನಾಗಿ ಮಾಡುತ್ತಿದೆ.

ನಮ್ಮ ಕೊಡಗಿನ ಇತಿಹಾಸವು ಭಾರತ ವರ್ಷದ ಬೇರೆ ಬೇರೆ ಭಾಗಗಳದರಂತೆ ಅನ್ಯ ದೇಶೀಯರಿಂದಲೆ ಮೊದಲಾಗಿ ಬರೆಯಲ್ಪಟ್ಟಿದೆ. ದೇಶದ ರಾಜಕೀಯ ವೃತ್ತ ಸಾಮಾಜಿಕ ಪರಿಸ್ಥಿತಿಯ ಇತಿಹಾಸವನ್ನು ಸುಸಂಗತವಾಗಿ ಬರೆದಿಡುವ ಕೃತ್ಯವು ಭಾರತೀಯರಿಗೆ ಹೊಸದು. ಆದುದರಿಂದ ಎಲ್ಲೆಲ್ಲಿಯೂ ಪಾಶ್ಚಾತ್ಯರ ಲೇಖನಿಯೆ ಈ ವಿಷಯದಲ್ಲಿ ಮೊದಲಾಗಿ ಶೋಡಗಿದುದು ಕಂಡುಬರುತ್ತದೆ. ತಾಮ್ರಶಾಸನ, ಶಿಲಾಲೇಖ, ಒಖ, ಹಳೆಯ ಲೇಖನ, ಕಾವ್ಯಾದಿಗಳಲ್ಲಿ ಬರುವ ಕವಿಗಳ ಇತಿವೃತ್ತ ಮತ್ತು ಅವೇ ಸಂದರ್ಭದಲ್ಲಿ ಅವರು ವರ್ಣಿಸಿರುವ ಆಯಾ ಕಾಲದ ರಾಜರ ವರ್ಣನೆ, ಹೊರಗಿನ ಯಾತ್ರಿಕರು ಬರೆದಿಟ್ಟ ಶಂತ್ರೆ ಇವೆ ನಮ್ಮ ದೇಶದ ಇತಿಹಾಸದ ತಳಹದಿ. ಈ ಸಾಧನೆಗಳು ಇತ್ತಲಾಗೆ ಕಾಲಕ್ರಮೇಣ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಬೆಳಕಿಗೆ ಬರುತ್ತಿರುವುದರಿಂದ ಕೆಲವು ವರ್ಷಗಳ ಹಿಂದೆ ಅನ್ಯದೇಶೀಯರು ಬರೆದ ಈ ದೇಶದ ಬೇರೆ ಬೇರೆ ಭಾಗಗಳ ಇತಿಹಾಸದಲ್ಲಿ ಹೇಗೆ ಎಷ್ಟು ತಿದ್ದುಪಾಟುಗಳು ಆಗಿವೆಯೊ ಹಾಗೆಯೆ ಕೊಡಗಿನ ಇತಿಹಾಸದಲ್ಲಿ ಇನ್ನೂ ಸಂಶೋಧನವು ಆಗಬೇಕಾಗಿದೆ. ಇತಿಹಾಸಪ್ರೇಮಿಗಳಾದ ಕನ್ನಡಿಗ ಸಂಶೋಧಕರು ಈ ಕಾರ್ಯವನ್ನು ಕೈಕೊಂಡು ಕೊಡಗಿನ ಹಿಂದಿನ ಇತಿಹಾಸವನ್ನೂ, ವೀರರಾಜರ ವಂಶವಾಳಿದ ಕಾಲದ ಇತಿಹಾಸವನ್ನೂ ವಿಶ್ವಸನೀಯವಾಗಿ ಬೆಳಿಗೆ ತರುವುದು ಇಷ್ಟವಾಗಿದೆ. ಆದರೆ ಇದು ವರೆಗೆ ಸುಶಿಕ್ಷಿತರ ತಿಳುವಳಿಕೆಗೆ ಬಂದಿರುವ ಚರಿತ್ರಾಂಶಗಳನ್ನು ಪರಿಶೀಲಿಸಿ ಹೇಳುವುದಾದರೆ ಇಲ್ಲಿಯ ಸ್ವರಾಜ್ಯದ ಕಾಲದಲ್ಲಿ ರಾಜಾಶ್ರಯವನ್ನು ಹೊಂದಿದ ಕವಿಗಳೂ, ಗ್ರಂಥಕರ್ತರೂ ಇದ್ದುದು ಕಂಡುಬರುವುದಿಲ್ಲ. ರಾಜಾಶ್ರಯದಿಂದ ಅಲ್ಲವಾದರೂ ಈ ಸೀಮೆಯಲ್ಲಿ ಕೆಲವು ಕವಿಗಳು ಇದ್ದರೆಂದು ಸಂಶೋಧಕರು ಅಭಿಪ್ರಾಯಪಡುತ್ತಾರೆ ಅಪ್ರಸಿದ್ಧವಾಗಿರುವ ಅಂತಹ ಕಾವ್ಯಗಳನ್ನು ಆಚ್ಚು ಹಾಕಿದರೆ ಅವರಿಂದ ಕನ್ನಡ ವಾಙ್ಮಯಾಭಿವೃದ್ಧಿಗೆ ಎಷ್ಟೋ ಸಾಹಾಯ್ಯವಾದೀತೆಂಬುದಕ್ಕೆ ಸಂಶಯವಿಲ್ಲ. ಆದುದರಿಂದ ಈ ದಿಕ್ಕಿನಿಂದ ನಮ್ಮ ಸಂಶೋಧಕರ ಪ್ರಯತ್ನವಾಡಿಯುವುದು ಅವಶ್ಯವಾಗಿದೆ. ಇದು ಮುಂದಿನ ಸಂಗತಿಯೂದರೂ ಒಂದು ಮಾತೇನೂ ಖಂಡಿತವಾದುದು. ಕೊಡಗಿನ ಸೀಮೆಯೆಂದು ಬೆಳಿಟ್ಟು ತೋರಿಸುವಂತೆ ಕನ್ನಡ ಕಾವ್ಯವಾಗಲಿ, ಗ್ರಂಥವಾಗಲಿ ಇದು ವರೆಗೆ ಬೆಳಕಿಗೆ ಬಂದಿಲ್ಲ.

ಹಿಂದಿನ ಕಾಲದ ಮಟ್ಟಿಗೆ ಈ ರೀತಿಯಿಂದ ಸಂಶಯಾಸ್ಪದವಾದ ವಾಙ್ಮಯ ಪರಿಸ್ಥಿತಿ ಇದ್ದರೂ ವರ್ತಮಾನ ಕಾಲದ ಪರಿಸ್ಥಿತಿಯು ಆಶಾಜನಕವಾಗಿದೆ ಎನ್ನಬಹುದು. ನಮ್ಮ ಕೊಡಗು ಸೀಮೆಯ ಅನೇಕ ತರುಣ ಸ್ತ್ರೀಪುರುಷರು ವಿದ್ಯಾಜ್ಞಾನ ಸಂಪನ್ನರಾಗಿ ಕನ್ನಡ ಭಾಷೆಯ ಸೇವೆಯನ್ನು ಮಾಡಲು ಉದ್ಯುಕ್ತರಾಗಿದ್ದಾರೆ. ದೊಡ್ಡ ದೊಡ್ಡ ಕಾವ್ಯಗಳದಾಗಲಿ, ಗ್ರಂಥಗಳದಾಗಲಿ ರಚನೆ ಇಲ್ಲವಾದರೂ ಪುಟ್ಟ ಪುಟ್ಟ ಪದ್ಯಗಳನ್ನೂ, ಲೇಖನಗಳನ್ನೂ ಬರೆಯುವ ತರುಣರ ಉತ್ಸಾಹವನ್ನು ನೋಡಿದರೆ ವಾಙ್ಮಯ ವಿಷಯದಲ್ಲಿ ಕೊಡಗಿನ ಭವಿಷ್ಯತ್ಕಾಲವು ಉಜ್ವಲವಾಗಿ ತೋರುತ್ತದೆ. ಮತ್ತು ಇವಕ್ಕೆ ಶುಭಶಕುನವೆಂಬಂತೆ ಅಥವಾ ಮಂಗಲಕರವಾದ ಪ್ರಾರಂಭವೆಂಬಂತೆ ಅಖಿಲಕರ್ನಾಟಕದ ಸಾಹಿತ್ಯ ಪರಿಷತ್ತು ತನ್ನ ಸಾನ್ನಿಧ್ಯದಿಂದ ನಮ್ಮನ್ನು ಈ ಹೊತ್ತು ಅನುಗ್ರಹಿಸುತ್ತಿದೆ. ಇಲ್ಲಿ ನೆರೆದಿರುವ ಮಹಾ ಮಹಾ ಸಾಹಿತ್ಯ ಭಕ್ತರೂ, ಸಾಹಿತ್ಯೋಪಾಸಕರೂ ಕನ್ನಡ ಸಾಹಿತ್ಯದ ಮತ್ತು ಭಾಷೆಯ ಪುರೋಭಿವೃದ್ಧಿಗೆ ಬರಬಹುದಾದ ಯಾವ ಯಾವ ಎಡರುಗಳಿವೆಯೊ ಅವುಗಳನ್ನು ಹೇಗೆ ಬದಿಗೆತ್ತಬಹುದು, ಅನುಕೂಲವಾದ ಸಾಧನಗಳನ್ನು ಹೇಗೆ ನಿರ್ಮಿಸಿಕೊಳ್ಳಬಹುದು, ಸಾಹಿತ್ಯ ಪರಿಷತ್ತಿನ ಪ್ರಚಾರ ಕಾರ್ಯವನ್ನು ಹೇಗೆ ಯಶಸ್ವಿಯನ್ನಾಗಿ ಮಾಡಬಹುದು; ಇನ್ನೇ ಮುತಾದ ಪ್ರಶ್ನೆಗಳನ್ನು ಆರ್ಚಿಸಿ ದೇಶದವರ ಆದರಣೆಯ ಬಗ್ಗೆ ತಮ್ಮ ನಿರ್ಣಯಗಳನ್ನು ಕೊಟ್ಟಾರೆಂಬುದು ನಿಜ. ಆದರೂ ಈ ಸಂದರ್ಭದಲ್ಲಿ ಒಂದೆರಡು ಸೂಚನೆಗಳನ್ನು ಕೊಡಹೋದರೆ ಅದು ಅವಾಸಂಗಿಕವಾಗಲಾರದೆಂದು ಮನಗಂಡು ಈ ಸಾಹಸವನ್ನು ಮಾಡತೊಡಗಿದ್ದೇನೆ

ಆಡುವ ಯಾವ ಭಾಷೆಯೆ ಆಗಲಿ, ಅದು ಎಲ್ಲ ಕಡೆಗಳಲ್ಲಿ ಒಂದೆ ರೂಪದಿಂದ ಇರುವುದು ಬಹು ಕಡಿಮೆ. ಭಾಷೆಯ ವ್ಯಾಪ್ತಿಗೆ ಒಳಪಟ್ಟ ಪ್ರದೇಶವು ಎಷ್ಟೆಷ್ಟು ದೊಡ್ಡದೊ ಅಷ್ಟೆಷ್ಟು ಆ ಭಾಷೆಯ ಏಕ ರೂಪತ್ವವು ಕಡಿಮೆಯಾಗುವುದು. ಈ ಮಾತಿಗೆ ಇಂಗ್ಲಿಷು, ಹಿಂದಿ ಇತ್ಯಾದಿ ಯಾವ ಭಾಷೆಯನ್ನೂ ಬೇಕಾದರೆ, ಉದಾಹರಿಸಿಕೊಳ್ಳಬಹುದು. ಭೂಸ್ಥಿತಿ, ವಾಯುಗುಣ, ಸುತ್ತಲು ಇತರ ಭಾಷೆಗಳನ್ನಾಡುವವರ ಸಹವಾಸ—ಈ ಕಾರಣಗಳಿಂದ ಮೇಲೆ ಹೇಳಿದಂತೆ ಆಡುವ ಭಾಷೆಗಳಲ್ಲಿ ವ್ಯತ್ಯಾಸಗಳು ಬಂದು ಅವುಗಳ ಏಕರೂಪತೆಗೆ ಭಂಗಬರುವುದು ಅನಿವಾರ್ಯವೆಂದು ಹೇಳಬಹುದು. ಒಂಬತ್ತು ವೈಲು ದಾಟಿದೊಡನೆ ನುಡಿ ಒಂದೆಯಾದರೂ, ಉಚ್ಚಾರ, ಸ್ವರಭೇದ ಮೊದಲಾದುದರಿಂದ ರೂಪಾಂತರವನ್ನು ಹೊಂದಿರುತ್ತದೆ ಎಂದು ಕೆಲವು ಭಾಷಾನಿರೀಕ್ಷಕರು ಅಭಿಪ್ರಾಯಪಡುತ್ತಾರೆ. ಈ ಮಾತಿಗನುಸಾರವಾಗಿ ನಮ್ಮ ಕನ್ನಡ ನುಡಿಯಲ್ಲಿ ಉಚ್ಚಾರಭೇದ, ಸ್ವರಭೇದ; ಇವು ಇರಬಹುದಾದರೂ ಗ್ರಂಥದಲ್ಲಿ ಬರುವಾಗ ಇದು ಏಕ ರೂಪತೆಯನ್ನಪೇಕ್ಷಿಸಹೋದರೆ ಅದು ತಪ್ಪಾದೀತೆ? ಸರಿಯಾದ ದುಃಖದ ಮಾತೇನೆಂದರೆ, ಕನ್ನಡ ಭಾಷೆಯ ಲೇಖನವು ಒಂದೊಂದು ಕಡೆಯಲ್ಲಿ ಒಂದೊಂದು ವಿಧವಾದ ರೂಪವನ್ನು ತಾಳಿದೆ! ಅದರೆ 'ಇದು ಕುಂದಲ್ಲ, ಅಲ್ಲಲ್ಲಿಯ ಅದರ ವೈಶಿಷ್ಟ್ಯ'ವೆಂಬುದಾಗಿ ಗ್ರಾಂಥಿಕ ಭಾಷೆಯ ರೂಪಭೇದವನ್ನು ಗಣನೆಗೆ ತೆಗೆದು ತಿರುಗಿಸಿ ಒಂದು ವೇಳೆ ಯಾರಾದರೂ ಸಮರ್ಥಿಸಬಹುದು. ಈ ಸಮರ್ಥನೆಯು ಅಷ್ಟೊಂದು ಸಮಂಜಸವಾದುದಲ್ಲ. ಗ್ರಾಂಥಿಕ ಭಾಷೆಯಲ್ಲಿಯೂ ವ್ಯತ್ಯಾಸಗಳು ಬರುವುದೆಂದರೆ ಅದಕ್ಕೆ ಒಂದೆ ಹಿಡಿತವಿಲ್ಲವೆಂಬುದೇ ಅರ್ಥವು. ಮತ್ತು ಈ ಕಾರಣದಿಂದಲೆ ನಮ್ಮ ಕನ್ನಡ ಭಾಷೆಗೆ ಇಂತಹ ದುರ್ದಶೆಯು ಬಂದಿರುವುದು. ಕನ್ನಡ ನುಡಿಯನ್ನಾಡುವ ಒಂದೆ ಸಂಸ್ಕೃತಿಯ ಸಂಗಡವರು ಬೇರೆ ಬೇರೆ ಸರಕಾರಗಳ ಆಡಳಿತದಲ್ಲಿ ಸೇರಿಹೋದುದರಿಂದ ಅವರು ಬರೆಯುವ ಭಾಷೆಯು ಒಂದೆ ಕನ್ನಡವಾದರೂ ಅದಕ್ಕೆ 'ಮೈಸೂರು ಕನ್ನಡ,' ಧಾರವಾಡ ಕನ್ನಡ,' ಮಂಗಳೂರು ಕನ್ನಡ' ಇತ್ಯಾದಿ ಬೇರೆ ಬೇರೆ ಒಳ ಹೆಸರುಗಳು ರೂಢವಾಗಿವೆ. ಇದು ನಿಜವಾಗಿ ಶೋಚನೀಯವಾದ ಸಂಗತಿಯು. ಕನ್ನಡದ ಈ ದುರವಸ್ಥೆಯನ್ನು ಹೋಗಲಾಡಿಸಬೇಕಾದರೆ, ಕನ್ನಡ ಪ್ರಾಂತದ ಏಕೀಕರಣವಾಗಬೇಕೆಂಬುದು ನಿಜ. ಆದರೆ ಭಾಷಾನುರೂಪವಾದ ಪ್ರಾಂತಘಟನೆಯು ಇಡಿ ಹಿಂದೂಸ್ಥಾನದ ರಾಜಕೀಯ ಪ್ರಶ್ನೆಯಾಗಿದೆ ಬರಿ ನಮ್ಮ ಆಕೆಯಲ್ಲಿ ಇದ್ದುದಲ್ಲ. ಅಲ್ಲದೆ ಇದು ಸಾಹಿತ್ಯ ಸಮ್ಮೇಳನಕ್ಕೆ ಸಂಬಂಧಿಸಿದ ವಿಷಯವೂ ಅಲ್ಲ. ಅಂತಹ ಸುಧಾರಣೆಯು ಬರುವ ತನಕ ಬಾಂಬಾಯಿ, ಮದ್ರಾಸು ಮೈಸೂರು, ನಿಜಾಂ, ಕೊಡಗು ಈ ಪ್ರಾಂತಗಳ ಕ್ರಮಿಕ ಪುಸ್ತಕಗಳನ್ನೂ, ಪಠ್ಯ ಪುಸ್ತಕಗಳನ್ನೂ ಮಧ್ಯವರ್ತಿಯೂದ ಒಂದೆ ಸಂಸ್ಥೆಯ ಮೇಲ್ವತನಖಿನಿಂದ ಹೊರಡಿಸುವ ವ್ಯವಸ್ಥೆಯನ್ನು ಕಲ್ಪಿಸಿಕೊಂಡರೆ ಅದರಿಂದ ಕನ್ನಡ ಭಾಷೆಯು ಏಕರೂಪತೆಯನ್ನು ತಕ್ಕ ಮಟ್ಟಿಗಾದರೂ ಸಾಧಿಸಬಹುದು.

ಮದ್ರಾಸು, ಮೈಸೂರು, ಹೈದರಬಾದುಗಳ ವಿಶ್ವವಿದ್ಯಾಲಯಗಳಲ್ಲಿ ಕನ್ನಡಕ್ಕೆ ಪ್ರವೇಶವು ದೊರೆತಿದೆ. ಬೊಂಬಾಯಿಯ ವಿಶ್ವವಿದ್ಯಾಲಯವಾದರೂ ಇದಕ್ಕೆ ಅಪವಾದವಲ್ಲ. ಈ ಪ್ರವೇಶದಿಂದಲೇ ಶಿಕ್ಷಣ ಇಲಾಖೆಗಳೊಳಗಿನ ಕನ್ನಡದ ಕೊರತೆಗಳು ಮಾಯವಾದವೆಂದು ನೆನಸಲಾಗದು. ಮೊಧ್ಯಮಿಕ ಶಿಕ್ಷಣದಲ್ಲಿ ದೇಶ್ಯಭಾಷೆಗಳನ್ನು ಮಾಧ್ಯಮಗಳನ್ನಾಗಿ ಮಾಡಬೇಕೆಂದು ಶಿಕ್ಷಣವ್ಯವಸಾಯದಲ್ಲಿ ನಿರತವಾದ ಈಗ ಎಷ್ಟೋ ಸಮಯದಿಂದ ಹೇಳುತ್ತಿರುವರಲ್ಲದೆ ಕಲಕತ್ತೆಯ ಸ್ಯಾಡ್ಲರ್ ಕಮಿಷನ್ ಕೂಡ ತನ್ನ ವರದಿಯಲ್ಲಿ ಈ ಅಭಿಪ್ರಾಯವನ್ನು ಒತ್ತಿ ಹೇಳಿದೆಯೆಂಬುದು ಎಲ್ಲರಿಗೆ ತಿಳಿದ ವಿಷಯವಾಗಿದೆ. ನಮ್ಮ ಪರಿಷತ್ತು ಕೂಡ ಈ ವಿಷಯದಲ್ಲಿ ಗೊತ್ತುವಳಿಯನ್ನು ಈ ವೊದಲೇ ದಾಟಿಸಿದೆ. ಆಕಾಂಕ್ಷಾರೂಪದಲ್ಲಿ ಅಥವಾ ಪ್ರಾರ್ಥನಾರೂಪದಲ್ಲಿ ಇರುವ ಈ ಗೊತ್ತುವಳಿಗೆ ಕಾರ್ಯರೂಪತೆಯನ್ನು ಕೊಡಲು ಪರಿಷತ್ತು ಪ್ರಯತ್ನಿಸುವುದು ಅವಶ್ಯವಾಗಿದೆ.

ಉಚ್ಚ ಶಿಕ್ಷಣದಲ್ಲಿ ಒಂದು ಭಾಷೆಗೆ ಪ್ರವೇಶವನ್ನು ಕೊಟ್ಟ ಮಾತ್ರದಿಂದ ವಿಶ್ವವಿದ್ಯಾಲಯದ ಕರ್ತವ್ಯವು ಪೂರ್ಣಗೊಳಲೊಲ್ಲದು. ಭಾಷಾಭಿವೃದ್ಧಿಗೆ ಅವಶ್ಯವಾದ ಗ್ರಂಥಗಳನ್ನು ಬರೆಯಿಸಬೇಕು. ಸಾಹಿತ್ಯಾಭಿವೃದ್ಧಿಯೆಂದರೆ ಬರೀ ಕಾವ್ಯ, ನಾಟಕ, ಕಥೆ ಮುಂತಾದವುಗಳ ನಿರ್ಮಿತಿಯೇ ಅಲ್ಲ. ವಾಙ್ಮಯದೊಳಗೆ ಇದೊಂದು ಶಾಖೆಯು. ಇತಿಹಾಸ, ತತ್ವಜ್ಞಾನ, ಭೌತಿಕಶಾಸ್ತ್ರ ಜ್ಯೋತಿಃಶಾಸ್ತ್ರ, ಸ್ವಾಪತ್ಯ ಇತ್ಯಾದಿ ಮಹತ್ತಾದ ಅನೇಕ ಶಾಖೆಗಳು ವಾಙ್ಮಯ ವೃಕ್ಷದಲ್ಲಿ ಪಲ್ಲವಿತವಾಗಬೇಕು. ಇಂತಹ ಪ್ರಯತ್ನವನ್ನು ವಿಶ್ವವಿದ್ಯಾಲಯಗಳು ತಮ್ಮ ಅಧಿಕಾರದಲ್ಲಿ ನಡಿಸಬೇಕು. ಮೈಸೂರಿನ ವಿಶ್ವವಿದ್ಯಾಲಯವು ಈ ರೀತಿಯಿಂದ ಪ್ರಯತ್ನವನ್ನು ನಡೆಯಿಸಿ ಉಚ್ಚ ತರಗತಿಯ ಗ್ರಂಥಪ್ರಸಪತ್ತನ್ನು ಪ್ರಕಟಿಸುತ್ತಿದೆ. ಇದು ಸಮಾಧಾನಕರವಾದ ಮತ್ತು ಅಭಿನಂದನೀಯವಾದ ಸಂಗತಿಯಾಗಿದೆ. ಮದ್ರಾಸು ಮೊದಲಾದ ಬೇರೆ ವಿಶ್ವವಿದ್ಯಾಲಯಗಳು ಸಹ ಇದನ್ನೇ ಅನುಕರಿಸುವುದು ವಿಹಿತವಾಗಿದೆ. ಆದರೆ ಈ ತರಹದ ಕಾರ್ಯವನ್ನು ಕೈಕೊಳ್ಳಲು ವಿಲಂಬವಿದ್ದಾದರೆ ಆ ವಿಶ್ವವಿದ್ಯಾಲಯಗಳು ಧಾರವಾಡದಲ್ಲಿಯ ನವಜೀವನ ಗ್ರಂಥಮಾಲೆಯಂತಹ ಸಂಸ್ಥೆಗೆ ಸಂಪೂರ್ಣ ದ್ರವ್ಯಸಾಹಾಯ್ಯವನ್ನು ಕೊಟ್ಟು ವಿಸ್ತೃತವಾದ ಶಾಸ್ತ್ರೀಯ ಗ್ರಂಥಗಳ ನಿರ್ಮಿತಿಯ ಉಪಕ್ರಮಕ್ಕೆ ಕೈಹಚ್ಚಬೇಕು.

ಶಿಕ್ಷಣದ ದೃಷ್ಟಿಯಿಂದ ವಿಶ್ವವಿದ್ಯಾಲಯಗಳೂ, ಮಧ್ಯ ಶಿಕ್ಷಣದ ಸಂಸ್ಥೆಗಳೂ ಕನ್ನಡ ವಾಙ್ಮಯವನ್ನು ಈ ಮೇರೆಗೆ ಪೋಷಿಸಬೇಕೆ

ಸಾರಿ ದೇಶೀಯ ಭಾಷೆಯ ಜ್ಞಾನವಿಲ್ಲದವರು ಬರುವರು. ಅವರಿಗೆ ತಮ್ಮ ಅತಿಕ್ಲಿಷ್ಟ ಪ್ರಜೆಗಳೊಡನೆ ಇಲ್ಲವೆ ಇಂಗ್ಲಿಷನ್ನರಿಯದ ಜನರೊಡನೆ ವಾಹನಾಡಲು, ಅವರ ಸುಖ ದುಃಖಗಳನ್ನು ಕೇಳಿ ತಿಳಕೊಳ್ಳಲು ಪ್ರಯಾಸವಾಗುವುದು. ಆಯಾ ದೇಶೀಯ ಭಾಷೆಯ ಪರಿಚಯ ಪಡೆದು ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕೆಂಬ ಸರ್ಕಾರಿ ಸಂಕೇತವು ಜಿಲ್ಲಾಧಿಕಾರಿ ಮುಂತಾದವರ ವಿಷಯದಲ್ಲಿ ಉಂಟೆ ಉಂಟು. ಈ ಸಂಕೇತವನ್ನು ತಪ್ಪದೆ ಆಚರಣದಲ್ಲಿ ತರಬೇಕು ವಾಕ್ಯವಲ್ಲ. ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ನ್ಯಾಯಾಧಿಕಾರಿಗಳು ತಮ್ಮ ತೀರ್ಪುಗಳನ್ನು ಮತ್ತು ನ್ಯಾಯ ನಿರ್ಣಯಗಳನ್ನು ದೇಶೀಯ ಭಾಷೆಯಲ್ಲೆ ಕೊಡಮುಂತಾಗಿ ಏರ್ಪಾಡಾಗುವುದು. ಆಯಾ ದೇಶೀಯ ಭಾಷಾಭಿವೃದ್ಧಿಯ ದೃಷ್ಟಿಯಿಂದ ಅತೀ ಆವಶ್ಯಕವಾಗಿದೆ.

ಭಾಷಾಭಿವೃದ್ಧಿಯೇ ಅಲ್ಲ, ಯಾವ ಕಾರ್ಯವಾದರೂ ಸರ್ವದಾ ಇನ್ನೊಬ್ಬರ ಸಾಹಾಯದಿಂದಲೆ ಸಾಧ್ಯವಾಗಬೇಕೆಂದು ನೆನಸುವುದು ಸರಿಯಲ್ಲ. ಸ್ವಾವಲಂಬನ ಹೊನ್ನು ಪರಾವಲಂಬನ ಮಣ್ಣು. ಆದುದರಿಂದ ತನ್ನ ಪ್ರಯತ್ನವೇ ಮೊದಲನೆಯದು. ಅಂತಹ ಪ್ರಯತ್ನವನ್ನು ಕೈಕೊಂಡು ಅವರಿವರೆಂದು ನೋಡದೆ ಏಕಪ್ರಕಾರವಾಗಿ ತನ್ನ ಧ್ಯೇಯದ ಕಡೆಗೆ ಮುಂದುವರಿಯುವವನಿಗೆ ಬೇರೆಯವರ ಸಾಹಾಯ, ದೈವಬಲ ಇವೆಲ್ಲವು ಆನಂತರ ತಾವಾಗಿಯೇ ಒದಗುತ್ತವೆ. ಈ ದೃಷ್ಟಿಯಿಂದ ಕನ್ನಡ ಸಾಹಿತ್ಯದ ಪುರೋಭಿವೃದ್ಧಿಯ ಕಾರ್ಯವನ್ನು ಸಾಹಿತ್ಯೋಪಾಸಕರು ತಾವೇ ಕೈಕೊಳ್ಳಬೇಕಾಗಿದೆ. ಸಂಶೋಧನದಿಂದ ಹಳೆ ಕಾವ್ಯ ಮುಂತಾದವುಗಳನ್ನು ಪ್ರಕಟಿಸುವುದು, ತಮ್ಮ ದೀರ್ಘವ್ಯಾಸಂಗ ಮತ್ತು ಅನುಭವ ಇವುಗಳ ಒಲದಿಂದ ಸ್ವತಂತ್ರವಾದ ಗ್ರಂಥರಚನೆಯನ್ನು ಮಾಡುವುದು, ಇತರ ಭಾಷೆಗಳಲ್ಲಿ ಬರೆದಿರುವ ಶಾಸ್ತ್ರೀಯ ಹಾಗೂ ಉಚ್ಚ ವಿಚಾರಗಳಿಂದ ತುಂಬಿದ ಗ್ರಂಥಗಳನ್ನು ಕನ್ನಡಿಸುವುದು, ಹಿಂದಿನ ಉದ್‌ಗ್ರಂಥಗಳನ್ನು ಸುಲಭ ಶೈಲಿಗೆ ಇಳಿಸಿ ಸಾಮಾನ್ಯರು ಕೂಡ ಅವುಗಳ ರಸವನ್ನು ಹೀರುವಂತೆ ಮಾಡುವುದು ಹೇಗೆ ವಾಙ್ಮಯೋಪಾಸಕರ ಕರ್ತವ್ಯವಾಗಿರುವುದೋ ಹಾಗೆಯೇ ಆ ವಾಙ್ಮಯೋಪಾಸಕರಿಗೆ ದ್ರವ್ಯಸಾಹಾಯವನ್ನೀಯುವುದು ಧನಿಕರ ಕರ್ತವ್ಯವಾಗಿದೆ. ಸಾಹಿತ್ಯಭಕ್ತರು ಸಾಹಿತ್ಯೈಕ್ಯಹೃದಯದಲ್ಲಿ ಹಗಲೂ ಇರುಳೂ ದುಡಿದು ರಚಿಸಿದ ಸಾಹಿತ್ಯ ಸಂಪತ್ತನ್ನು ಶ್ರೀಮಂತರೂ, ಸುಖಜೀವಿಗಳೂ ಕೊಂಡುಕೊಳ್ಳದೆ ಹೋದರೆ, ಅವರಿಗೆ ಯಥಾಶಕ್ತಿ ಪ್ರೋತ್ಸಾಹವನ್ನು ಕೊಡದೆ ಹೋದರೆ ವಾಙ್ಮಯಾಭಿವೃದ್ಧಿಯು ನಿಜವಾಗಿ ಉಂಟಾಗಲಿಕ್ಕಿಲ್ಲ. ವಾಙ್ಮಯ ಸೇವಕರನ್ನು ಹತ್ಯಕರಕೊಂಡು ಅವರಿಂದ ಬಹು ಶ್ರುತತೆಯನ್ನು ಪಡೆಯುವುದೇ ಶ್ರೀಮಂತರ ಧನದ ಸದ್ವಿನಿಯೋಗವು ಈ ವೇರೆಗೆ ಸರಸ್ವತೀ ಪುತ್ರರೂ, ಲಕ್ಷ್ಮೀ ಪುತ್ರರೂ ಒಟ್ಟಿಗೆ ಸೇರಿ ವಾಙ್ಮಯ ಸೇವೆಯನ್ನು ನಡೆಯಿಸಿದಲ್ಲಿ ಭಗವಂತನು "ಪರಸ್ಪರರಿಗೆ ಉಪಕಾರಮಾಡಹತ್ತಿದರೆ ನೀವು ಶ್ರೇಯಸ್ಸನ್ನು ಹೊಂದುವಿರಿ" ಎಂದು ಗೀತೆಯಲ್ಲಿ ಹೇಳಿದಂತೆ ಆಗ ಕನ್ನಡ ವಾಙ್ಮಯವು ನಿಜವಾಗಿ ಅಭಿವೃದ್ಧಿಯನ್ನು ಹೊಂದುವುದು.

ಈ ವೇರೆಗೆ ನನ್ನ ಹಲವು ಸೂಚನೆಗಳಿದ್ದರೂ ಮುಖ್ಯವಾಗಿ ಒಂದು ಮಾತನ್ನು ಪ್ರತಿನಿಧಿಗಳ ಅವಗಾಹನಕ್ಕೆ ತರಬೇಕೆಂದಿದ್ದೇನೆ. ಪರಿಷತ್ತಿನ ಸಮ್ಮೇಳನಗಳಲ್ಲಿ ಇದುವರೆಗೆ ಉಪಯುಕ್ತವಾದ ಅನೇಕ ಗೊತ್ತುವಳಿಗಳು ನಿರ್ಣಯಿಸಲ್ಪಟ್ಟಿದ್ದಾವೆ. ಪರಿಷತ್ತಿನ ಪರವಾಗಿ ಹೊರಡುವ ಸಾಹಿತ್ಯ ಪರಿಷತ್ ಪತ್ರಿಕೆಯ ಮುಖಾಂತರ ಪರಿಷತ್ತಿನ ಉದ್ದೇಶದ ಮತ್ತು ಆ ಗೊತ್ತುವಳಿಗಳ ಅಭಿಪ್ರಾಯದ ಪ್ರಚಾರವು ಯಥಾಶಕ್ತಿ ಯಾಗುತ್ತಿದ್ದುದ್ದಲ್ಲದೆ, ಕೆಲವು ಮಹನೀಯರನ್ನು ಕರ್ನಾಟಕದ ಬೇರೆ ಬೇರೆ ಭಾಗಗಳಿಗೆ ಕಳುಹಿಸಿ ಪ್ರಚಾರ ಕಾರ್ಯವನ್ನು ಮಾಡಿದುದು ಸಹ ಪರಿಷತ್ತಿನ ಹಿಂದಿನ ಇತಿವೃತ್ತದ ವೇಲಿಂದ ಕಂಡುಬರುತ್ತದೆ. ಆದರೂ ಈ ಪ್ರಚಾರ ಕಾರ್ಯವು ಸಾಲದು. ಪ್ರತಿವರ್ಷ ಹಲವು ಗೊತ್ತುವಳಿಗಳನ್ನು ದಾಟಿಸುವುದಕ್ಕಿಂತ ಯಾವುದಾದರೂ ಒಂದೊ ಎರಡೊ ಗೊತ್ತುವಳಿಗಳನ್ನು ತೆಕ್ಕೊಂಡು ವರ್ಷದ ಹನ್ನೆರಡೂ ತಿಂಗಳು ಅವುಗಳ ಕಲಸ ನಡೆಯುವಂತೆ ಮಾಡಹತ್ತಿದರೆ ಪರಿಷತ್ತು ತನ್ನ ಉದ್ದೇಶವನ್ನು ಅದಷ್ಟು ಬೇಗನೆ ಕೈಗೂಡಿಸೀತೆಂದು ತೋರುತ್ತದೆ. ನನ್ನ ಈ ಮಾತಿನ ಅರ್ಥವು ಸಮ್ಮೇಳನಗಳಲ್ಲಿ ತುಂಬಾ ಗೊತ್ತುವಳಿಗಳನ್ನು ದಾಟಿಸಬಾರದೆಂಬದಾಗಿ ಅಲ್ಲ. ಸಮ್ಮೇಳನಗಳಲ್ಲಿ ಬೇರೆ ಬೇರೆ ವಿಧದ ಗೊತ್ತುವಳಿಗಳನ್ನು ತಂದು ಸಾಹಿತ್ಯಭಕ್ತರು ಚರ್ಚಿಸುವುದರಿಂದ ಜನತೆಗೆ ಒಂದು ಬಗೆ ತಿಕ್ಷ್ಣತೆಯನ್ನು ಕೊಟ್ಟಂತಾಗುತ್ತದೆ. ಮತ್ತು ಇದರಿಂದ ಉಂಟಾಗತಕ್ಕ ಸುಪರಿಣಾಮವು ಯಾವುದೆಂದರೆ—ಲೋಕಮತವು ಸಾಹಿತ್ಯದ ಬೆಳವಣಿಗೆಯ ಪ್ರಶ್ನೆಯ ಕಡೆಗೆ ಅನುಕೂಲವಾಗುತ್ತದೆ. ಈ ಒಗೆಯ ಅನುಭವವನ್ನು ಇಂತಹ ಗೊತ್ತುವಳಿಗಳಿಂದ ನಾವು ನಮ್ಮ ಸೆಂಗಿಲ್ಲಿ ಕಟ್ಟಿಕೊಳ್ಳಬಹುದಾದರೂ, ನಾನು ಈಗಲೆ ಹೇಳಿದಂತೆ ಕೆಲವು ಅತ್ಯಾವಶ್ಯಕ ಮತ್ತು ಮಹತ್ತ್ವದ ಗೊತ್ತುವಳಿಗಳನ್ನು ವರ್ಷದ ಹನ್ನೆರಡೂ ತಿಂಗಳು ದುಡಿದು, ಕಾರ್ಯರೂಪದಲ್ಲಿ ತಂದರೆ ಅದು ಹೊನ್ನಿಗಿಂತಲೂ ಹಳದಿಯೂದೀತೆಂದು ತೋರುತ್ತದೆ. ಇರಲಿ.

ಪ್ರತಿನಿಧಿಗಳಿರಾ, ನಾನು ನನ್ನ ಭಾಷಣವನ್ನು ಇನ್ನು ಉದ್ದ ಬೆಳಸುವುದು ಚಾದಸಲ್ಲ. ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಕನ್ನಡ ಸಾಹಿತ್ಯಸಮ್ಮೇಳನದ ಮಹೋತ್ಸವಕ್ಕಾಗಿ ನಾವು ತಮ್ಮನ್ನು ಬರಮಾಡಿಕೊಂಡಿದ್ದೇವೆ. ಅದೇ ನಾವು ಇದು ವರೆಗೆ ಇರತಹ ಕೂಟಗಳನ್ನು ಬರುಗಿಸಿ ಅನುಭವವನ್ನು ಪಡೆದವರಲ್ಲ. ರೈಲು ಬಂಡಿಯ ಸಂಚಾರವು ಇಲ್ಲಿ ಇಲ್ಲದಿರುವುದರಿಂದ ಬೇಕಾದ ಸಾಹಿತ್ಯಗಳನ್ನು ಒದಗಿಸಿಕೊಳ್ಳುವ ಸೌಕರ್ಯವು ಕಡಿಮೆ. ನಮ್ಮ ದೇಶವು ಆಷ್ಟೊಂದು ಸಮೃದ್ಧವಾದುದೂ ಅಲ್ಲ. ಈ ಎಲ್ಲ ಕಾರಣಗಳಿಂದ ನಮ್ಮ ಆತಿಥ್ಯೋಪಚಾರಗಳಲ್ಲಿ ಅನೇಕ ಕುಂದುಕೊರತೆಗಳು ಇದ್ದೇ ಇವೆ. ಈ ಉಪಚಾರಗಳಲ್ಲಿರುವಂತೆಯೆ ನಮ್ಮ ಸ್ವಾಗತ ಮಂಡಲದ ನಿಬಂಧವಾಚನ, ಉಪನ್ಯಾಸ, ನಾಟಕ, ಪ್ರಹಸನ, ಸ್ಮಾರಕ ಪುಸ್ತಕ ಪ್ರಕಾಶನ ಇತ್ಯಾದಿ ಇತ್ಯಾದಿ ಸಾಹಿತ್ಯ ಪ್ರದರ್ಶನದಲ್ಲಿಯೂ ಕೊರತೆಗಳು ತುಂಬಾ ಇದ್ದೇ ಇವೆ. ಈ ಸಂಗತಿಗಳನ್ನೆಲ್ಲ ಮನಸ್ಸಿಗೆ ತರುವಾಗ ತಮ್ಮಂತಹ ಪ್ರಬುದ್ಧ ಸಾಹಿತ್ಯೋಪಾಸಕರನ್ನು ದೂರದೂರದಿಂದ ಕರೆಯಿಸಿ ಊಟ ಉಪಚಾರಗಳಿಂದಾಗಲಿ, ಮನೋವಿನೋದಗಳಿಂದಾಗಲಿ ಯೋಗ್ಯವಾಗಿ ಸತ್ಕರಿಸಲು ತಮ್ಮಿಂದ ಆಗಲಿಲ್ಲವಲ್ಲವೆ ಎಂಬುದೊಂದು ಯೋಚನೆಯು ಸ್ವಾಗತಮಂಡಲದವರಿಗೆ ಹುಟ್ಟದೆ ಇರುವುದಿಲ್ಲ. ಸವಿಯಾದ ಊಟ ಉಪಚಾರಗಳನ್ನು ಕೊಡಲು ಆಗದೆ ಇದ್ದರೂ, ಕಟ್ಟಕಡೆಗೆ "ತೃಣಾನಿ ಭೂಮಿರುದಕಂ ವಾಕ್ ಚತುರ್ಥೀ ಚ ಸೂನೃತಾ," ಎಂದು ಹೇಳಿದಂತೆ ರಸಭರಿತವಾದ ಒಂದು ಸವಿನುಡಿಯನ್ನಾದರೂ ಆಡೋಣವೆಂದರೆ ನಾವು ಆಷ್ಟೊಂದು ವಿದಗ್ಧರೂ ಅಲ್ಲ. ಸಾರಾಂಶ, ನಾನು ನನ್ನ ಭಾಷಣದ ಪ್ರಾರಂಭದಲ್ಲಿ ಹೇಳಿದಂತೆ, ನಮ್ಮ ಆತಿಥ್ಯೋಪಚಾರಗಳೆಂದರೆ ಇನ್ನೊಂದರ್ಥದಲ್ಲಿ ಅದು ಬರೆ ಉಪಚಾರದ ಮಾತೆ ಸರಿ. ಈ ರೀತಿಯ ಪರಿಸ್ಥಿತಿ ಇದ್ದರೂ ಸನ್ನಿಧಾನಸಪಡತಕ್ಕ ನಮಗೊಂದು ಸಂಗತಿ ಇದೆ. ಮೊದಲೆ ತಾವು ಉನ್ನತ ಮನಸ್ಕರು. ಅದರಲ್ಲೂ ಇಲ್ಲಿಯ ಮೇಲಿನ ಪ್ರದೇಶಕ್ಕೆ ಬರುವಾಗ ತಮ್ಮ ದೃಷ್ಟಿ ಇನ್ನಷ್ಟು ಉನ್ನತವಾಗಿಯೆ ಇದೆ ಆದುದರಿಂದ ನಾವು ಪ್ರೇಮಪೂರ್ವಕವಾಗಿ ಕೊಡುವ ಸ್ವಾಗತವನ್ನು ಉನ್ನತ ಮನಸ್ಸಿನಿಂದಲೂ, ಉನ್ನತ ದೃಷ್ಟಿಯಿಂದಲೂ ಸ್ವೀಕರಿಸಿ ನಮ್ಮಲ್ಲಿ ತಾವು ಪ್ರೇಮವನ್ನು ವೃದ್ಧಿಗೊಳಿಸಬೇಕೆಂದು ಕೇಳಿಕೊಂಡರೆ ಅದು ತಪ್ಪಾಗಲಾರದು. ಯಾಕೆಂದರೆ, ಪ್ರೇಮವು ಪ್ರೇಮವನ್ನು ಬೆಳಸುತ್ತದೆ. ಬೇರೆ ಯಾವುದರ ನ್ಯೂನತೆ ಇದ್ದರೂ ತಮ್ಮ ಬಂಧುಗಳಾದ ನಮ್ಮಲ್ಲಿ ಕನ್ನಡ ನಾಡಿನ ವಿಷಯವಾಗಿಯೂ, ಕನ್ನಡಿಗರ ವಿಷಯವಾಗಿಯೂ ನಿರ್ವ್ಯಾಜವಾದ ಪ್ರೇಮವು ತುಂಬಿಕೊಂಡಿದೆ ಎಂದು ತಾವು ತಿಳಕೊಳ್ಳಬಹುದೆಂದು ನಾನು ವಿನಯಪೂರ್ವಕವಾಗಿ ಹೇಳುವೆನು. ನಮ್ಮಲ್ಲಿ ಯಾವ ಸಿದ್ಧತೆ ಇರದಿದ್ದಲ್ಲವಾದರೂ ತಮ್ಮನ್ನು ಇಲ್ಲಿ ಬರಮಾಡಿಕೊಳ್ಳಲು ನನಗೆ ಪ್ರೇರಕವೂ, ಪ್ರೋತ್ಸಾಹಕವೂ ಒಂದೆ. ಮತ್ತು ಅದು ಕನ್ನಡಿಗರ ಮೇಲಿರುವ ನಮ್ಮ ಪ್ರೇಮವೆ ಸರಿ. ಆದುದರಿಂದ ನಾವು ಕೊಡುವ ಊಟದಲ್ಲಿ ಷಡ್‌ರಸಗಳಿಲ್ಲವಾದರೂ ಪ್ರೇಮರಸವಿದೆ. ನಾವು ಪ್ರದರ್ಶಿಸುವ ಸೌಹಿತ್ಯದಲ್ಲಿ ನವರಸಗಳಿಲ್ಲವಾದರೂ ಪ್ರೇಮರಸವಿದೆ. ಆ ಪ್ರೇಮವು ಅಮೂರ್ತವಾದರೂ ತಮ್ಮ ಪ್ರೇಮದ ಕಣ್ಣಿಗೆ ಅದು ಕಾಣಿಸಬಹುದು. ಆ ಪ್ರೇಮವು ಅಶಬ್ದವಾದರೂ ಅದರ ಇಂಪಾದ ಹಾಡು ತಮ್ಮ ಪ್ರೇಮದ ಕಿವಿಗೆ ಕೇಳಿಸಬಹುದು. ಮೂತ್ಯವಲ್ಲ, ಕನ್ನಡಿಗರ ವಿಷಯದಲ್ಲಿ ಇರುವ ನಮ್ಮ ಪ್ರೇಮದ ರಸವನ್ನೂ, ಪ್ರೇಮದ ಸೌಗಂಧ್ಯವನ್ನೂ, ಪ್ರೇಮದ ಸುಖಸ್ಪರ್ಶವನ್ನೂ ತಾವು ತಮ್ಮ ಪ್ರೇಮದ ರಸನೇಂದ್ರಿಯದಿಂದಲೂ, ಪ್ರೇಮದ ಘ್ರಾಣೇಂದ್ರಿಯದಿಂದಲೂ, ಪ್ರೇಮದ ಸ್ಪರ್ಶೇಂದ್ರಿಯದಿಂದಲೂ ಅನುಭವಿಸಬಹುದು. ಕೊನೆಗೆ, ಕನ್ನಡ ಸಾಹಿತ್ಯಾಭಿವೃದ್ಧಿಗಾಗಿ ನಿಗಳಾದ ಸ್ತ್ರೀಪುರುಷ ಪ್ರತಿನಿಧಿಗಳಿರಾ, ನಮ್ಮಲ್ಲಿಯೂ ನಮ್ಮ ದೇಶದಲ್ಲಿಯೂ ಆತ್ಮೀಯತ್ವಾಭಿವೃದ್ಧಿಯನ್ನಿಟ್ಟು ನನ್ನ ಆಹ್ವಾನವನ್ನು ಸ್ವೀಕರಿಸಿ, ಇಲ್ಲಿಗೆ ದಯಮಾಡಿಸಿರುವ ತಮ್ಮ ಗಳಿಗೆ ನಾನು ನಮ್ಮ ಈ ಸ್ವಾಗತ ಮಂಡಲದ ಪರವಾಗಿ ಸ್ವಾಗತ ವಚನವನ್ನಿತ್ತು, ಇನ್ನು ಮುಂದಿನ ಕಾರ್ಯವನ್ನು ನಡೆಸಲು ಸೂಚಿಸಿ ನನ್ನ ಸ್ಥಾನವನ್ನು ಅಂಗೀಕರಿಸುವೆನು.

---

### ಕರ್ನಾಟಕ ಸಾಹಿತ್ಯ ಪರಿಷತ್ತಿನ ೧೦ನೇ ಅಧಿವೇಶನ.

(2ನೇ ಪುಟದಿಂದ ಮುಂದುವರಿದದ್ದು.)

ಮಧ್ಯಾಹ್ನದ ಮೇಲೆ 3 ಗಂಟೆಗೆ ಪರಿಷತ್ತಿನ ಸಭೆ ಮತ್ತೆ ಪುನಹ ಕೂಡಿತು. ಮಂಗಳೂರಿನ ಮೆ. ಪರಮೇಶ್ವರಮಯ್ಯನವರು ಛಂದಸ್ಸು ಶಾಸ್ತ್ರವನ್ನು ಕುರಿತು ಒಂದು ಪ್ರಬಂಧವನ್ನು ಓದಿದರು. ನಂತರ 5 ಗಂಟೆಯ ಹರಿಗೆ, ಈ ಮೊದಲೇ ವಿಷಯನಿರ್ಣಯಕ ಸಮಿತಿಯವರಿಂದ ಪಾಸುಮಾಡಲಾಗಿದ್ದ ಸುಮಾರು 14 ಠರಾವುಗಳು ಸಭೆಯಲ್ಲಿ ಚರ್ಚಿಸಲ್ಪಟ್ಟು ಬಹುಮತದಿಂದ ಮಂಜೂರು ಮಾಡಲಾದವು.

ಪುನಹ ಕವಿ ಸಮ್ಮೇಳನವು ಪ್ರಾರಂಭವಾಗಿ ರಾತ್ರಿ 7½ ಗಂಟೆ ವರೆಗೆ ನಡೆಯಿತು. ಮೈಸೂರಿನ ಮೆ. ಸುಬ್ರಹ್ಮಣ್ಯಶಾಸ್ತ್ರಿಯವರು ಕನ್ನಡ ಭಾರತ, ಭಾಗವತ ಮತ್ತು ಡೈವಿನ ಭಾರತ, ಇವುಗಳನ್ನು ಹಾಡಿದರು. ಮೈಸೂರಿನ ಮೆ. ಜಿ. ಪಿ. ರಾಜರತ್ನಮ್‌ರವರು ವಿನೋದವಾದ 2 ಪದ್ಯಗಳನ್ನೂ, ಮೆ. ಯು. ಆರ್. ಶ್ರೀನಿವಾಸ ಮೂರ್ತಿಯವರು, ಮಂಗಳೂರಿನ ಮೆ. ಪುಣಾಂಜತಾಯರವರು, ಬೆಳ್ಳಾವಿನ ಆನಂದ ಕವಿಯವರು, ಪಿ. ಟಿ. ನರಸಿಂಹಾಚಾರ್ಯರೇ ಮೊದಲಾದವರು ತಮ್ಮ ತಮ್ಮ ಕವನಗಳನ್ನು ಹಾಡಿ ಸಭಿಕರ ಮನಸ್ಸನ್ನು ಸಂತೋಷಪಡಿಸಿದರು. ಕಡೆಗೆ ಅಧ್ಯಕ್ಷರ ಉಪಸಂಹಾರದ ಭಾಷಣದಿಂದ ಕವಿಸಮ್ಮೇಳನವು ಅತ್ಯವಸಾನವಾಯಿತು

ರಾತ್ರಿ 9½ ಯಿಂದ 12½ ಗಂಟೆ ವರೆಗೆ ಕಾಸರಗೋಡಿನ ಮೆ. ಬಲಿಪ ನಾರಾಯಣ ಭಾಗವತರು ಮತ್ತು ಪಾರ್ಟಿಯವರು ಚಪ್ಪರದಲ್ಲಿ ಯಕ್ಷಗಾನ ಪ್ರಸಂಗವನ್ನು ನಡಿಸಿದರು.

### ಮೂರನೇ ದಿನ.

ತಾ. 30 ರಲ್ಲಿ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನದ ವರೆಗೆ ಪರಿಷತ್ತಿನ ವಾರ್ಷಿಕ ಮಹಾಸಭೆಯು ಅಧ್ಯಕ್ಷರ ಶಿಬಿರದಲ್ಲಿ ನಡಿಸಲ್ಪಟ್ಟಿತು. ಆ ವೇಳೆಯಲ್ಲಿ ಮೆ. ಪ್ರಹ್ಲಾದರವರ ಅಧ್ಯಕ್ಷತೆಯಲ್ಲಿ ಚಪ್ಪರದಡಿಯಲ್ಲಿ ತರುಣ ಕವಿಗಳು ಕವನಗಳನ್ನು ಓದುವ, ಹಾಡುವ ಪ್ರಸಂಗವನ್ನು ನಡಿಸಿದರು.

ಮಧ್ಯಾಹ್ನದ ಮೇಲೆ ಪರಿಷತ್ತಿನ ಸಭೆ 4 ಗಂಟೆಗೆ ಚಪ್ಪರದಲ್ಲಿ ಸೇರಿತು. ಮೈಸೂರಿನ ಮೆ. ಯಂ. ಶ್ರೀಕಂಠಯ್ಯನವರು ತಮ್ಮ ಕವನಗಳನ್ನು ಓದಿದನಂತರ ಉಳಿದಿದ್ದ ಕೆಲವು ಠರಾವುಗಳು ಚರ್ಚಿಸಲ್ಪಟ್ಟು ಮಂಜೂರು ಮಾಡಲಾದವು. ಬರುವ ವರ್ಷ ಪರಿಷತ್ತಿನ ಅಧಿವೇಶನವನ್ನು ಹುಬ್ಬಳ್ಳಿಯಲ್ಲಿ ನಡಿಸಲು ಮೂರುಸಾವಿರ ಮಠದ ಜಗದ್ಗುರು ಸಿದ್ಧೇಶ್ವರ ಸ್ವಾಮಿಯವರು ಆಮಂತ್ರಣವಿತ್ತಿರುವರೆಂದು ತಿಳಿಸಲಾಯಿತು ಕಡೆಗೆ ಅಧ್ಯಕ್ಷರ ಉಪಸಂಹಾರದ ಭಾಷಣವೂ, ಮೈಸೂರು, ಮಂಗಳೂರು, ಬೆಳ್ಳಾಂ, ಧಾರವಾಡ, ಸೈಜಾಂ ಕರ್ನಾಟಕ ಮೊದಲಾದ ಸ್ಥಳ ಪ್ರತಿನಿಧಿಗಳ ಪರವಾಗಿ ಒಬ್ಬೊಬ್ಬರು ಮತ್ತು ಪರಿಷತ್ತಿನ ಪರವಾಗಿ ಅದರ ಸೆಕ್ರೆಟರಿಯವರು, ಸ್ವಾಗತ ಕಮಿಟಿಯವರಿಗೂ, ಕೂಡಿಗಿನ ಜನರಿಗೂ ವಂದಿಸುವ, ಸ್ವಾಗತ ಕಮಿಟಿಯ ಅಧ್ಯಕ್ಷರ, ಸೆಕ್ರೆಟರಿಗಳ ಮತ್ತು ಕೆಲವು ಮೆಂಬರುಗಳ ಪರಿಷತ್ತಿನವರಿಗೂ ತಮಗೆ ಸಹಾಯ ಮಾಡಿದ ಎಲ್ಲರಿಗೂ, ನೆರೆದಿದ್ದ ಸಭಿಕರಿಗೂ ಮತ್ತು ಅಧ್ಯಕ್ಷರಿಗೂ ಕೃತಜ್ಞತೆಯನ್ನು ಸೂಚಿಸುವ ಉಪಚಾರದ ಭಾಷಣಗಳೂ ಆದ ಮೇಲೆ ಸಭೆಯು ಸರಿಯಾರು 6 ಗಂಟೆಗೆ ಜಯಘೋಷದೊಡನೆ ಮುಕ್ತಾಯವಾಯಿತು.

ರಾತ್ರಿ 9½ಯಿಂದ 11½ ಗಂಟೆ ವರೆಗೆ ಮೈಸೂರಿನವರು ಕೆಲವು ಪ್ರಹಸನಗಳನ್ನು ಆಡಿ ತೋರಿಸಿದಲ್ಲದೆ ಶ್ರೀಯುತ ಕೆ. ವಿ. ಪುಟ್ಟಪ್ಪನವರು ತಮ್ಮ ಕವನಗಳನ್ನು ಹಾಡಿ ಚಪ್ಪರದಲ್ಲಿ ಕಿಕ್ಕಿರಿದು ನೆರೆದಿದ್ದ ಜನರ ಮೆಚ್ಚುಗೆಯನ್ನು ಪಡೆದರು ನೆರೆದಿದ್ದವರು ಇದರಿಂದ ತೃಪ್ತರಾಗದೆ ಮೇರೆದಿನವೂ ಸ್ವಲ್ಪ ಸಮಯ ಹಾಡುವಂತೆ ಮೆ. ಪುಟ್ಟಪ್ಪನವರನ್ನು ಕೋರಿಕೊಂಡರು.


(FREE INSURANCE)
ಉಚಿತ ವಿಮಾ.
ಮ್ಯೂಚುವಲ್ ಬೆನಿಫಿಟ್ ಸ್ಕೀಂ ಎಂಬ
ಅನ್ಯೋನ್ಯ ಸಹಾಯ ಪದ್ಧತಿ.
(Mutual Benefit Scheme.)
ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ,
ಲಿಮಿಟೆಡ್, ಹೆಡ್ ಆಫೀಸು—ಮದ್ರಾಸ್.

ಲೈಫ್ ಇನ್‌ಷ್ಯೂರೆನ್ಸಿನ ಕಂಪೆನಿಗಳ ಕಾನೂನಿಗೆ ಅಧೀನವಾಗಿದೆ. ಸುಕಾರದಲ್ಲಿ ಡಿಪಾಜಿಟ್ ಇಡಲಾಗಿದೆ.

ಈ ಮೇಲ್ಕಂಡ ಕಂಪೆನಿಯು ಅನ್ಯೋನ್ಯ ಸಹಾಯಕ್ಕಾಗಿ ಕಳೆದ ವರ್ಷ ಅಂದರೆ 1931ನೇ ಫೆಬ್ರವರಿಯಲ್ಲಿ ಮದ್ರಾಸಿನಲ್ಲು ಸ್ಥಾಪಿತವಾಗಿ ಈ ವರೆಗೆ 26000 ಸಾವಿರಕ್ಕೂ ಹೆಚ್ಚಾಗಿ ಪಾಲಿಸಿಗಳನ್ನು ಪಡೆದಿರುತ್ತೆ. ಈ ಮೇಲ್ಕಂಡ ಕಂಪೆನಿಗೆ ಐಶ್ವರ್ಯವಂತರೂ, ಬಡವರೂ, ಮಿತಸುಖಾದನೆಯವರೂ, ಜಾತಿ ಮತಗಳ ಬೇಧವಿಲ್ಲದೆ ಜಾತಿವಾರಾರೂ, ಕೋಮುವಾರರೂ, ಹೆಂಗಸರೂ, ಗಂಡಸರೂ ಹೆಚ್ಚು ರುಜು ಕೊಡಬೆಯೇ ಉಚಿತ ಜೀವ ವಿಮೆ ಸೂಡಿಕೆಳ್ಳಬಹುದು. 18 ವರ್ಷಕ್ಕೆ ಮೇಲ್ಪಟ್ಟು 60 ವರ್ಷದೊಳಗಿರುವವರು ಈ ಕಂಪೆನಿಗೆ ಸೇರಬಹುದು. ಈ ಕಂಪೆನಿಗೆ ಸೇರಲು ಇಚ್ಛಿಸುವವರು ಸೇರುವಿನಲ್ಲಿ ರೂ. 5—8—0ನ್ನು ಮೊತ್ಯ ಕಟ್ಟಬೆಕ್ಕಾದ್ದು. ಆನಂತರ ತಿಂಗಳು ಒಂದರ 1 ರೂ. ಸ್ವಲ್ಪದರಲ್ಲು ದೊಡ್ಡ ಲಾಭ ದೊರೆಯುತ್ತೆ. ಆದ್ದರಿಂದ ಇಂಥಾ ಸುಸಮಯವನ್ನು ಕಳೆದುಕೊಳ್ಳಬೇಡಿ. ಈ ದಿನವೇ ಪಾಲಿಸಿಗಳನ್ನು ಹೊಂದಲು ಅರ್ಹರಾಗಿರಿ. ಇದರ ಫಲವನ್ನು ಹೊಂದಲು ಭಾಗಿಗಳಾಗಿರಿ.

ಹೆಚ್ಚಿನ ವಿವರಗಳಿಗೆ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಬಹುದು. ಅಲ್ಲದೆ ಇವರು ಕೊಡಗಿನ ಎಲ್ಲ ಕಡೆಗಳಲ್ಲಿಯೂ ತಿರುಗುತ್ತಲಿರುತ್ತಾರೆ.

ಯಸ್. ಬಿ. ಕರುಂಬಯ್ಯ,
ಏಜೆಂಟ್,
ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
12—9 ನಾಪೋಕ್ಲು. (ಕೊಡಗು.

Wanted.

Assets 17500000 Exeeeds. | Pre—Income 33 Lacks.

Realy Capable and Influential **Special Agent** having organising Capacity either on commission basis or salary for the NATIONAL INSURANCE CO. LTD. Calcutta. (Est 1906.)

*Please apply to—*

CHIEF ORGANISER,
National Insurance Co. Ltd.,
Arcot Srinivas Char St.,
12—1 Bangalore City.

# ಕೊಡಗಿನಲ್ಲಿ ಶಾಸನಭಂಗ.

## ಹುದಿಕೇರಿ, ವೀರಾಜಪೇಟೆಗಳಲ್ಲಿ ದಸ್ತಗಿರಿ.

### ಕರಪತ್ರ ಹಂಚಿದಕ್ಕೆ ಸೆರೆಮನೆವಾಸ.

### ತರುಣನ ವರ್ಷದ ಮೂರನೇ ಸಾರಿ ಜೈಲು ಯಾತ್ರೆ.

### ಸಾಹಿತ್ಯ ಪರಿಷತ್ತಿನಲ್ಲಿಯೂ ಜಯಘೋಷಕ್ಕೆ ಕೈದು.

ಈ ತಾ. 26 ನೇ ಸೋಮವಾರ ಮಧ್ಯಾಹ್ನ 2 ಗಂಟೆ ಸಮಯದಲ್ಲಿ ಹುದಿಕೇರಿಸಂತೆಯಲ್ಲಿ ಶ್ರೀಯುತರುಗಳಾದ ಐಚ್ಚಮಾಡ ಬೆಳ್ಯಪ್ಪನವರು, ಚೋನಿರ ಕುಶಾಲಪ್ಪನವರು ಮತ್ತು ಚೊಟ್ಟೆಯಂಡಮಾಡ ಐಚ್ಚಣ್ಣನವರು ಕೊಡಗಿಗೆ "ಯುದ್ಧ ಮಂಡಳಿ" ಯಿಂದ ಪ್ರಕಟಿಸಲ್ಪಡುತ್ತಿರುವ "ವೀರ ಭಾರತಿ" ಎಂಬ ಹಸ್ತಪತ್ರಗಳನ್ನು ಹಂಚುತ್ತಾ, ಜಯಘೋಷ ಮಾಡುತ್ತಾ ಸಾರಾಯಿ ಅಂಗಡಿಯಿಂದ ಹೊರಟು ಸುಂತೆ ಮೂಳದ ವರೆಗೆ ಬರುವಷ್ಟರಲ್ಲಿ ಪೊಲೀಸ್ ಸಬ್ ಇನ್‌ಸ್ಪೆಕ್ಟರವರು ಕೆಲವು ಪೊಲೀಸರೊಂದಿಗೆ ಈ ಮೂರು ಸತ್ಯಾಗ್ರಹಿಗಳನ್ನು ಕೈದು ಮಾಡಿದರು. ಸುಮಾರು 500 ಜನರು ಜಯಘೋಷ ಮಾಡುತ್ತಾ ಒಂದು ಫರ್ಲಾಂಗಿನ ವರೆಗೆ ಕೈದು ಮಾಡಲ್ಪಟ್ಟವರನ್ನು ಹಿಂಬಾಲಿಸಿದರು. ಸಾಯಂಕಾಲ ಇವರು ಮೂವರೂ ಬಸ್ಸಿನಲ್ಲಿ ವೀರಾಜಪೇಟೆಗೆ ತರಲ್ಪಟ್ಟರು. ಜನವರಿ ತಾ. 3ರ ವರೆಗೆ ಕ್ರಿಸ್‌ಮಸ್ ರಜೆಯಾದುದರಿಂದ ಇವರ ವಿಚಾರವನ್ನು ನಡಿಸದೆ, ಇವರನ್ನು ಸಬ್ ಜೈಲಿನಲ್ಲಿ ಇಟ್ಟಿರುವರೆಂದು ತಿಳಿಯುತ್ತೇವೆ.

ಇದೇ ವರ್ಷ ಈ ವೊದಲು ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಶಾಸನ ಭಂಗಕ್ಕಾಗಿ 2 ಸಾರಿ ಜೈಲುವಾಸದನ್ನು ಅನುಭವಿಸಿ, ಹೊರಗೆ ಬಂದು, ಕಾಸರಗೋಡು ಉಡುವಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಶ್ರೀಯುತ ಯಸ್. ಆರ್. ನಾರಾಯಣರಾವ್‌ರೆಂಬ ಉತ್ಸಾಹಭರಿತನಾದ ತರುಣನು ತನ್ನ ಜನ್ಮಭೂಮಿಯಾದ ಕೊಡಗಿಗೆ ಬಂದು, ಈ ತಾ. 28 ನೇ ಬುಧವಾರ ವೀರಾಜಪೇಟೆ ಸುಂತೆಯಲ್ಲು ಸಾಯಂಕಾಲ 3 ಗಂಟೆ ಸಮಯಕ್ಕೆ ಕಾಂಗ್ರೆಸ್ಸಿನ ಕರಪತ್ರಗಳನ್ನು ಹಂಚುತ್ತಿದ್ದಾಗ್ಯೆ ಪೊಲೀಸಿನವರು ಬಂದು, ಹಸ್ತಪತ್ರಗಳನ್ನು ಕೈವಶಮಾಡಿಕೊಂಡು, ನಾರಾಯಣರಾಯರನ್ನು ದಸ್ತಗಿರಿಮಾಡಿದರೆಂದೂ, ಕ್ರಿಸ್‌ಮಸ್ ರಜೆಯ ದೆಸೆಯಿಂದ ಇವರೂ ಸಬ್ ಜೈಲಿನಲ್ಲಿಡಲ್ಪಟ್ಟಿರುವರೆಂದೂ ತಿಳಿಯಬರುತ್ತದೆ.

ಮಡಿಕೇರಿಯಲ್ಲಿ ತಾ. 29 ರಲ್ಲಿ ನಡೆದ ಕರ್ನಾಟಕ ಕವಿಸಮ್ಮೇಳನದಲ್ಲಿ ಮೈಸೂರಿನ ಶ್ರೀಯುತ ಕೆ. ವಿ. ಪುಟ್ಟಪ್ಪನವರು 'ಭಾರತ ತಪಸ್ವಿನಿ' ಎಂಬ ತಮ್ಮ ಕವಿತೆಯನ್ನು ಹಾಡಿದಾಗ್ಯೆ ಜನರು ಸಂತೋಷಗೊಂಡು ಉತ್ಸಾಹದಿಂದ ಕೈಚಪ್ಪಾಳೆ ಹೊಡೆದಾಗ್ಯೆ, ಶನಿವಾರ ಸಂತೆಯ ಶ್ರೀಯುತ ಬಿದರೂರು ಮಾದಯ್ಯನವರು ಮಹಾತ್ಮಗಾಂಧಿಯವರ ಹೆಸರಿನಲ್ಲಿ ಜಯಘೋಷ ಮಾಡಿದಕ್ಕಾಗಿ, ಸ್ವಲ್ಪ ಸಮಯ ಕಳೆದ ಮೇಲೆ ಅಂದರೆ ಊಟಕ್ಕಾಗಿ ಸಭೆಯು ನಿಲ್ಲಿಸಲ್ಪಟ್ಟು ಜನರು ಚದುರಿದ ಮೇಲೆ, ಪೊಲೀಸಿನವರಿಂದ ದಸ್ತಗಿರಿಮಾಡಲ್ಪಟ್ಟು, ಸ್ಟೇಶನಿಗೆ ಕರೆದೊಯ್ಯಲ್ಪಟ್ಟರೆಂದೂ ಅಲ್ಲಿಂದ ತನ್ನ ಮನೆಗೆ ಬಸ್ಸಿನಲ್ಲಿ ಕಳುಹಿಸಲ್ಪಟ್ಟರೆಂದೂ ವರ್ತಮಾನ.

---

## ಒಳದೇಶ.

ಫೈಜ್‌ಪುರದಲ್ಲಿ ಪ್ಲೇಗಿನ ಹಾವಳಿಯು ಜೋರಾಗುತ್ತಿದೆಯೆಂದೂ, ಕಳೆದ ವಾರ ಇಬ್ಬರು ಮೃತರಾದರೆಂದೂ ಸುದ್ದಿ.

ಉತ್ತರ ವಯನಾಡಿನ ಕೊಡವರು ಹುತ್ತರಿ ಹಬ್ಬವನ್ನು ಈ ತಾ. 17ರಲ್ಲಿ ಜೆನ್ಸಿ ಎಸ್ಟೇಟಿನಲ್ಲಿರುವ ಮೆ. ಕೆ. ಎ. ಕುಶಾಲಪ್ಪನವರ ಭವನದಲ್ಲಿ ನಡಿಸಿದರೆಂದು ತಿಳಿಯುತ್ತೇವೆ.

ಕ್ರಿಸ್‌ಮಸ್ ರಜವು ಮುಗಿದು ಮಡಿಕೇರಿ ಸೆಂಟ್ರಲ್ ಹೈಸ್ಕೂಲು ಜನವರಿ ತಾ. 2ರಲ್ಲಿಯೂ, ಕಾನ್ವೆಂಟ್ ಹೈಸ್ಕೂಲು ತಾ. 12ರಲ್ಲಿಯೂ ತೆರೆಯಲ್ಪಡುವವೆಂದು ತಿಳಿಯುತ್ತೇವೆ.

ಕರ್ನಾಟಕ ಸಾಹಿತ್ಯ ಪರಿಷತ್ತಿನ 18ನೇ ಅಧಿವೇಶನವು ಈ ತಾ. 28, 29 ಮತ್ತು 30ರಲ್ಲಿ ಮಡಿಕೇರಿಯಲ್ಲಿ ಬೆಂಗಳೂರಿನ ಮೆ. ಡಿ. ವಿ. ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ಜಯಪ್ರದವಾಗಿ ನಡೆಯಿತು. ಇದರ ವಿವರವು ಬೇರೊಂದು ಕಡೆ ಕೊಡಲಾಗಿದೆ.

ಪ್ಲೀಡರ್ ಎನ್. ಎಸ್. ರಾಮಯ್ಯನವರು ಮಡಿಕೇರಿಯಲ್ಲು 34 ವರ್ಷಗಳಿಂದ ಲಾಯರ್ ಕೆಲಸ ಮಾಡುತ್ತಾ ಇದ್ದು, ಈಗ ವೀರಾಜಪೇಟೆಯಲ್ಲು ಲಾಯರ್ ಕೆಲಸ ಮಾಡುವ ಉದ್ದಿಶ್ಯ ವೀರಾಜಪೇಟೆ ಕ್ಲಾಕ್ ಟವರ್ ಒಳಿ ಮಹಡಿಯ ಮೇಲೆ ಆಫೀಸು ತೆರೆದಿರುತ್ತಾರೆ.

ಕರ್ನಾಟಕ ಸಾಹಿತ್ಯ ಪರಿಷತ್ತಿನ 18ನೇ ಅಧಿವೇಶನವನ್ನು ತೆರೆಯಲು ಒಪ್ಪಿದ್ದ ಕಮಿಷನರವರು ಆ ಸಮಯದಲ್ಲಿ ಮೂವುಕೂಟ ಕ್ಯಾಂಪಿನಲ್ಲಿದ್ದದರಿಂದ, ಆ ಕೆಲಸವನ್ನು ಅವರು ನಡಿಸಲಿಲ್ಲವೆಂತಲೂ, ಅವರು ಜನವರಿ ತಾ. 2ರಲ್ಲಿ ಮಡಿಕೇರಿಗೆ ಹಿಂದಿರುಗುವರೆಂದೂ ವರ್ತಮಾನ.

ಉತ್ತರ ವಯನಾಡಿನ ಕೊಡಗು ಸಂಘದವರು ಮೂನಂತೋಡಿನಲ್ಲಿ ತಾ. 4ರಲ್ಲಿ ನಡಿಸಿದ ತಮ್ಮ ವೊಟಿಂಗಿನಲ್ಲಿ ಕೊಡಗು ಪ್ರತ್ಯೇಕ ಪ್ರಾಂತ್ಯವಾಗಿಯೇ ಇರಬೇಕೆಂದೂ, ಉತ್ಪತ್ತಿಗೆ ತಕ್ಕಂತೆ ಖರ್ಚನ್ನು ಜೋಡಿ ಮಾಡಿಕೊಳ್ಳಬೇಕೆಂದೂ ಶಕಾವು ಪಾಸು ಮಾಡಿದರೆಂದು ಸಂಘದ ಸೆಕ್ರೆಟರಿಯವರು ತಿಳಿಸಿರುತ್ತಾರೆ.

ತಾ. 24ರಲ್ಲಿ ನಡೆದ ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ವೊಟಿಂಗಿನಲ್ಲಿ, ಕಾರ್ಯದರ್ಶಿಯ ಕೆಲಸಕ್ಕೆ ಮೆ. ಸಿ. ಯನ್. ವೆಂಕಪ್ಪಯ್ಯನವರು ಕೊಟ್ಟ ರಾಜಿನಾಮೆಯು ಅಂಗೀಕರಿಸಲ್ಪಟ್ಟು, ಆ ಕೆಲಸವನ್ನು ನಡಿಸಲು ಬ್ಯಾಂಕಿನ ಜಾನ್ಜಿಯರಾದ ಮೆ. ಮನೆಯಪಂಡ ಬೆಳ್ಯಪ್ಪನವರನ್ನು ಆರಿಸಲಾಯಿತು. ಅಲ್ಲದೆ ಮೆ. ಸಿ. ಯನ್. ವೆಂಕಪ್ಪಯ್ಯನವರು ಮತ್ತು ಮೆ. ಐ. ಸಿ. ಸುಬ್ಬಯ್ಯನವರು ಬ್ಯಾಂಕಿನ ಡೈರೆಕ್ಟರ ಪದವಿಗೆ ರಾಜಿನಾಮೆ ಕೊಟ್ಟದ್ದರಿಂದ ಅವರ ಬದಲು ಮೆ. ಯಸ್. ಬಸಪ್ಪನವರು ಮತ್ತು ಮೆ. ಕೊಡಂದೆರ ಸಿ. ದೇವೈಯ್ಯನವರು ಆರಿಸಲ್ಪಟ್ಟರು. ವೊಟಿಂಗಿನ ವಿವರವು ಒರುವ ವಾರ ಪ್ರಕಟಿಸಲಾಗುವುದು.

---

## ಹಿಂದೂದೇಶ.

ಬರ್ಮಾವನ್ನು ಹಿಂದೂ ದೇಶದ ಸರ್ಕಾರದಿಂದ ಪ್ರತ್ಯೇಕಿಸಬಾರದೆಂದು ಅಲ್ಲಿಯ ಕೌನ್ಸಿಲಿನಲ್ಲಿ ತರಾವು ಬಹುಮತದಿಂದ ಪಾಸಾಯಿತು.

ಗುರುವಾಯೂರು ದೇವಸ್ಥಾನಕ್ಕೆ ಹರಿಜನರನ್ನು ಬಿಡಬಹುದೆಂಬ ವಿಷಯ ಅಲ್ಲಿಯ 10 ಮೈಲು ಸುತ್ತ ಮುತ್ತಲಿನ ಮೇಲ್ಜಾತಿ ಹಿಂದೂಗಳ ಓಟಿಗೆ ತೆಗೆದಲ್ಲಿ ದೊಡ್ಡ ಬಹುಮತವು ಬಡಬಹುದೆಂದು ಓಟು ಕೊಟ್ಟಿರುವರು.

ಬಂಗಾಳದಲ್ಲಿ ಮಿಡ್ನಾಪುರ ಡಿಸ್ಟ್ರಿಕ್ಟಿಗೆ ಸೇರಿದ ಎರಡು ಗ್ರಾಮಗಳವರು 'ಲಾ ಆರ್ಡರನ್ನು' ಭಂಗಪಡಿಸುವ ಕಾರ್ಯಗಳನ್ನು ಮಾಡುತ್ತಿದ್ದಾರೆಂಬ ಅಪರಾಧಕ್ಕಾಗಿ ಒಂದು ಗ್ರಾಮಕ್ಕೆ 350, ಇನ್ನೊಂದು ಗ್ರಾಮಕ್ಕೆ 300 ರೂ. ಗಳ ದಂಡವು ವಿಧಿಸಲಾಗಿದೆ.

ತಾ. 28 ರಲ್ಲಿ ಕಲ್ಕತ್ತಾದಲ್ಲಿ ನಡೆದ ಮುಸ್ಲಿಂ ಲೀಗ್ ಕಾನ್‌ಫರೆನ್ಸಿನ ವಿಷಯ ನಿಯತಪ್ತುಕ ಕಮಿಟಿಯಲ್ಲಿ ಅಲ್ಲಹಾಬಾದಿನ ಒಪ್ಪಂದದ ವಿಷಯ ಭಿನ್ನಾಭಿಪ್ರಾಯ ಹುಟ್ಟಿ ಕೆಲವರು ವಿಟಿಂಗು ಬಿಟ್ಟು ಹೋಗಿಬಿಟ್ಟರು. ಉಳಿದವರು ಸದರಿ ಒಪ್ಪಂದವನ್ನು ವಿರೋಧಿಸಿ ಮಾಡಿದ ತೀರ್ಮಾನವು ಮಹಾಸಭೆಯಲ್ಲಿಯೂ ಪಾಸಾಯಿತು.

ತಾ. 28 ರಲ್ಲಿ ಮಹಾತ್ಮ ಗಾಂಧಿಯವರು ಯರವಾಡ ಜೈಲಿನಲ್ಲಿ ಮೆ. ಸಿ. ರಾಜಗೋಪಾಲಚಾರಿ ಮತ್ತು ಮೆ. ಕೇಳಪ್ಪನಾಯರೊಂದಿಗೆ ದೀರ್ಘ ಚರ್ಚೆ ನಡಿಸಿ, ಜನವರಿ ತಾ. 2 ರಲ್ಲಿ ಪ್ರಾರಂಭಿಸಲಿಕ್ಕಿದ್ದ ಉಪವಾಸ ವ್ರತವನ್ನು ಸದ್ಯ ಪ್ರಾರಂಭಿಸೆ ವುದಿಲ್ಲವೆಂದು ನಿಶ್ಚಯಿಸಿರುವರು. ಈ ವಿಷಯ ಅವರು ಬೇಗನೆ ಒಂದು ಪ್ರಕಟಣೆಯನ್ನು ಹೊರಡಿಸುವರು. ಹಾಗೆಯೇ ಕೇಳಪ್ಪನಾಯರವರೂ ತಾ. 2—1—'33 ರಲ್ಲಿ ಉಪವಾಸವನ್ನು ಪ್ರಾರಂಭಿಸುವುದಿಲ್ಲ.

ತಿರುವಾಂಕೂರು ಸಂಸ್ಥಾನದಲ್ಲಿ ದೇವಾಲಯಗಳನ್ನು ಸರ್ವ ಹಿಂದು ಭಕ್ತರಿಗಾಗಿ ತೆರೆದರೆ ನಂತರ ಜಾವೋರಿನ್‌ರೂ, ಕೊಚ್ಚಿನ್ ಮಹಾರಾಜರೂ ತಮ್ಮ ತಮ್ಮ ದೇವಾಲಯಗಳನ್ನು ತೆರೆಯುವರೆಂದೂ, ಸಂಸ್ಥಾನದ ದೇವಾಲಯಗಳನ್ನು ಸರ್ವ ಹಿಂದೂ ಭಕ್ತರಿಗಾಗಿ ತೆರೆಯಲು ಆಜ್ಞೆ ಮಾಡಬೇಕೆಂದೂ ಪ್ರಾರ್ಥಿಸುವ ತಂತಿಯನ್ನು ಸುಮಾರು 50 ಜನ ಹಿಂದೂಗಳಲ್ಲದ ಬೊಂಬಾಯಿಯ ಪ್ರಸಿದ್ಧ ಮಹಿಳೆಯರು ತಿರುವಾಂಕೂರು ಮಹಾರಾಣಿಯವರಿಗೆ ಕಳುಹಿಸಿದ್ದಾರೆ.

ಯರವಾಡದ ಜೈಲಿನೊಳಗೆ ಗಾಂಧಿಯರ ಸಮ್ಮುಖದಲ್ಲಿ ಚಿಕ್ಕದೊಂದು ಪರಿಷತ್ತು. ಇದಕ್ಕೆ ಪಂಡಿತರ ಪರಿಷತ್ತೆಂದು ಹೆಸರು. ಇದು ೨೩ಕ್ಕೆ ಸೇರಿತು. ಕಾಶಿ ವಿದ್ಯಾಪೀಠದ ಸಂಸ್ಕೃತ ವಿದ್ಯಾಲಯದ ಪರಮಾಚಾರ್ಯರಾದ ಶ್ರೀ. ಧುರ್ವೆ—ಇವರು ೬ ಮಂದಿ ಶಾಸ್ತ್ರಿಗಳ ಸಹಾಯದಿಂದ, ಅಸ್ಪೃಶ್ಯರನ್ನು ದೇವಾಲಯಗಳೊಳಗೆ ಬಿಡುವುದು ಶಾಸ್ತ್ರನಿಷಿದ್ಧವಲ್ಲ ಎಂದು ವಾದಮಾಡಿದರು. ಪುರಾಣ ಮತವಾದಿಗಳಾದ ೭ ಮಂದಿ ಪಂಡಿತರು ಕೂಡದೆಂದು ವಾದಿಸಿದರು. ಅಖಿಲ ಭಾರತ ಸನಾತನ ಸ್ವರಾಜ್ಯ ಸಂಘದವರಿಗೆ ಮಹಾತ್ಮರು ಆಮಂತ್ರಣ ಕೊಟ್ಟಿದ್ದರೂ ಅವರ ಕಡೆಯಿಂದಾದರೂ ಸಭೆಗೆ ಬಂದಿರಲಿಲ್ಲ. ಅನೇಕ ಮಂದಿ ಶಾಸ್ತ್ರಿಗಳು ಬಂದಿದ್ದರು

ಗುರುವಾಯೂರಿನಲ್ಲಿ ಜನಮತ ಸಂಗ್ರಹವನ್ನು ಮಾಡಿದುದಾಯಿತು ಬಹು ಜನರು ಅಸ್ಪೃಶ್ಯರು ದೇವಾಲಯ ಪ್ರವೇಶಮಾಡಿದಲ್ಲಿ ತಮಗೇನೂ ಆಕ್ಷೇಪವಿಲ್ಲವೆಂದು ಸೂಚಿಸಿದ್ದಾರೆ, ಅಲ್ಲದೆ ಡಾ. ಸುಬ್ಬರಾಯನವರು ಕೌನ್ಸಿಲಿನಲ್ಲಿ ಒಂದು ಮಸೂದೆಯನ್ನು ತರುತ್ತಾರಷ್ಟೆ. ಇದಕ್ಕಿನ್ನೂ ಸರಕಾರದ ಸಮ್ಮತಿ ದೊರೆಯಲಿಲ್ಲ. ಈ ಎರಡು ಕಾರಣಗಳಿಂದ ಉಪವಾಸವು ಮುಂದುವರಿವುದು. ಕೇಳಪ್ಪನವರು ಉಪವಾಸ ಪ್ರಾರಂಭಮಾಡದೆ ಗಾಂಧಿಯವರು ಪ್ರಾರಂಭಿಸುವಂತಿಲ್ಲ. ಜೆಮೊರಿನರು ಮೃತ್ಯ ಅವಿಚಲರಾಗಿದ್ದಾರೆ. "ಗುರುವಾಯೂರು ದೇವಸ್ಥಾನವಿರುವುದು ಅಲ್ಲಿಯ ಹತ್ತು ಮೈಲಿನೊಳಗಿನವರಿಗಾಗಿ ಅಲ್ಲ. ಹಿಂದೂ ದೇಶದ ಶ್ರದ್ಧಾವಂತರಾದ ಸಕಲ ಹಿಂದುಗಳ ಉಪಯೋಗಕ್ಕಾಗಿ ಇರುವುದದು. ಆದುದರಿಂದ ಅಲ್ಲಿಯ ಜನಮತ ಸಂಗ್ರಹಕ್ಕೆ ನಾನೇನೂ ಬೆಲೆ ಕೊಡುವುದಿಲ್ಲ" ಎನ್ನುತ್ತಾರೆ ಅವರು. ಈ ಮಧ್ಯೆ ಮತಸಂಗ್ರಹದ ಸತ್ಯಾಗ್ರಹಿಗಳು ಅನ್ಯಾಯವೂಡಿದರೆಂದು ಕೆಲವು ಪಿರ್ಯಾದಿಗಳೂ ಆಗಿವೆಯಂತೆ. ಗಾಂಧಿಯವರ ಉಪವಾಸ ಮುಂದುವರಿಯಿತೆಂದು ಸುಮ್ಮನೆ ಕುಳಿತಿರುವುದಲ್ಲ. ಮಾಡಬೇಕಾದ ಕೆಲಸಗಳನ್ನು ಮಾಡಿಯೇ ತೀರಬೇಕೆಂದು ಶ್ರೀ. ಬೀರ್ಲರು ಹೇಳುತ್ತಾರೆ.

---

## ವಿದೇಶ.

ಪ್ಯಾರಿಸ್ ನಗರದ ಪ್ರಖ್ಯಾತ ನರ್ತಕಿಯಾದ ಮಿಸ್ಟಿಂಗ್ ಎಂಬವಳೂ, ಆಸ್ಟ್ರೇಲಿಯಾ ದೇಶದ ನಟಿಯಾದ ಮಿಸ್ ಫೇವೂಬ್ ಎಂಬವಳೂ ತಮ್ಮ ಸೊಗಸಾದ ಕಾಲುಗಳನ್ನು ಎರಡು ಲಕ್ಷ ಪೌಂಡುಗಳಿಗೆ ಇನ್‌ಷೂರ್ ಮಾಡಿದ್ದಾರೆ.

ಸಬ್ ಕಾರ್ಪೋಥಿಯನಿನ ಸೊವೇಕಿಯೊ ಎಂಬಲ್ಲಿ ಇಲಿಗಳ ಕಾಟವು ತಡೆಯಲಾರದಾಗಿದೆ. ಬೀದಿಗಳಲ್ಲಿ ಅವುಗಳದೇ ಪಡೆ ನೋಟಾರುಗಾರರಿಗೆ ತಮ್ಮ ರಥವನ್ನು ಸಾಗಿಸುವುದೇ ಅಸಾಧ್ಯ. ಇವು ದವಸ ಧಾನ್ಯಕ್ಕೆ ಮಾಡಿದ ಉಪದ್ರದಿಂದ ಸಾಧಾರಣ ೫೦೦೦೦೦ ಜನರ ಹೊಟ್ಟೆಗೆ ಅನ್ನವಿಲ್ಲದಂತಾಗಿದೆ. ಈ ಬರಗಾಲವನ್ನು ತಡೆಯುವುದಕ್ಕಾಗಿ ೧೫೦೦ ಗಾಡಿ ದವಸ ಧಾನ್ಯವು ಪರದೇಶದಿಂದ ಇಲ್ಲಿಗೆ ಬಂದಿದೆ.

ಜಗದ್ವಿಖ್ಯಾತ ಪಿಟೀಲು ವಿದ್ವಾಂಸನಾದ ಕುಬೆಲಿಕ್ ಎಂಬಾತನು ತನ್ನ ಕೈಬೆರಳುಗಳನ್ನು ಇಪ್ಪತ್ತಾರು ಸಾವಿರ ಪೌಂಡುಗಳಿಗೆ ವಿಮೆಮಾಡಿದ್ದಾನೆ. ಅವನ ಬೆರಳುಗಳೇ ಅವನ ಆಸ್ತಿ. ಅವಿಲ್ಲದಿದ್ದರೆ ಅವನೊಂದು ಸ್ವರವನ್ನೂ ಹೊರಡಿಸಲಾರ. ಆದರೆ ಈ ರೀತಿಯಾದ ಅಂಗಗಳ ವಿಮೆ ಮಾಡಿರುವವನು ಈ ಕುಬೆಲಿಕ್ ಒಬ್ಬನೇ ಅಲ್ಲ, ಮತ್ತು ವಿಚಿತ್ರವೂ ಅಲ್ಲ. ಎಡಗೈ ಹೆಬ್ಬೆಟ್ಟು 7500 ಪೌಂಡು, ಚಿಕ್ಕ ಬೆರಳು 2200 ಪೌಂಡು. ಮಧ್ಯದ ಮೂರು ಬೆರಳುಗಳು 7200 ಪೌಂಡು. ಬಲಗೈ ಹೆಬ್ಬೆಟ್ಟು 900 ಪೌಂಡು. ಚಿಕ್ಕ ಬೆರಳು 470 ಪೌಂಡು. ಮಧ್ಯದ ಮೂರು ಬೆರಳುಗಳು 6900 ಪೌಂಡು.

ಪಾರ್ಲಿಮೆಂಟಿನಲ್ಲಿ ಹಿಂದೂದೇಶದ ವಿಷಯಕವಾದ ಸಣ್ಣದೊಂದು ಚರ್ಚೆ ಎದ್ದಿತು. ಹಿಂದೂ ದೇಶದ ವಿಷಯವಾಗಿ ಉದಾರಧೋರಣವನ್ನು ಕೈಕೊಳ್ಳಬೇಕು; ರಾಜಕೀಯ ಕೈದಿಗಳನ್ನು ಬಿಡಬೇಕು; ಹೊಣೆಗಾರಿಕೆಯ ಸರಕಾರವನ್ನು ಕೊಡಬೇಕು, ಎಂದು ವೊದಲಾಗಿ ಶ್ರೀ. ವೋರ್ಡನ್ ಜೋನ್ಸ್ ಎಂಬವರು ಹೇಳಿದರು. ಅವಕ್ಕೆ ಉತ್ತರವಾಗಿ ಸರ್. ಸಾಮುವೇಲ್ ಹೋರ್‌ರವರು ಹೀಗೆ ಹೇಳಿದರು: ಹಿಂದೂ ದೇಶಕ್ಕೆ ಹಿತವನ್ನು ಮಾಡಬೇಕೆಂದು ನಮ್ಮ ಬುದ್ಧಿಯೂ ಹೇಳುತ್ತದೆ. ಚಕ್ಕಗೋಷ್ಠಿ ಫಲಿತಾಂಶಗಳು ಹೊರಬೀಳುವಾಗ ನಾವು ಹೇಳುವ ಮಾತಿನ ಸತ್ಯಾಂಶವು ತಿಳಿದುಬಂದೀತು. ಈಗ ಹಿಂದೂ ದೇಶದ ಸ್ಥಿತಿ ಸುಧಾರಿಸಿದೆ. ಬರುವ ವರ್ಷ ಖಂಡಿತವಾಗಿಯೂ ವಿಶೇಷ ಶಾಸನಗಳ ಅವಶ್ಯತೆ ಇಲ್ಲವೆಂದಾಗುವುದು. ಇಲ್ಲಿಂದ ಇಂಡಿಯಾ ಲೀಗಿನ ಪರವಾಗಿ ಕೆಲವರು ಹಿಂದೂ ದೇಶಕ್ಕೆ ಹೋಗಿ ಬರೆದುದೆಲ್ಲ ಕಣ್ಣುಕಟ್ಟು. ಕಾಂಗ್ರೆಸು ಅವರಿಗೆ ಹಣ ಕೊಟ್ಟಿದೆ. ಕಾಂಗ್ರೆಸಿನ ಖರ್ಚಿನಿಂದ ಅವರು ಹೋಗಿದ್ದಾರೆ. ಈ ನಾಟಕವನ್ನು ಕಾಂಗ್ರೆಸಿನವರೆ ಮಾಡಿಸಿದುದು.

3ನೇ ದುಂಡು ಮೇಜು ಪರಿಷತ್ತು ಈ ತಾ. 24ರಲ್ಲಿ ಅಂತ್ಯವಾಯಿತು. ಅಲ್ಲಿ ನಡೆದ ಚರ್ಚೆಗಳ ಮತ್ತು ತೀರ್ಮಾನಗಳನ್ನನುಸರಿಸಿ ಬ್ರಿಟಿಷ್ ಸರ್ಕಾರದವರು ಬರುವ ಫೆಬ್ರವರಿ ತಿಂಗಳೊಳಗೆ ಒಂದು ಪ್ರಕಟಣೆಯನ್ನು ಹೊರಡಿಸಲಿಕ್ಕಿರುವರು. ಅದನ್ನು ನೋಡಿದ ವಿನಹ ಅಭಿಪ್ರಾಯ ಕೊಡಲು ಸಾಧ್ಯವಿಲ್ಲವೆಂದು ಇಂಡಿಯನ್ ಲಿಬರಲ್ ಪಕ್ಷದವರ ಹೇಳಿಕೆಯಾಗಿದೆ. ಅದು ತೃಪ್ತಿಕರವಾಗಿರಲಾರದೆಂದು ಕಾಷ್ಟ್ರೀಯ ಪಕ್ಷದವರ ಭಾವನೆ. ಸರ್ಕಾರದ ಸಹಕಾರಿಗಳಿಗಾದರೋ ಯಾವುದೂ ತೃಪ್ತಿಯಾಗುವದು! ಆದರೆ ಯಾವ ತರದ ರಜನಿದೊರೆತರೂ ಅದಕ್ಕೆ ಕಾಂಗ್ರೆಸ್ಸಿನವರ ಸಹಕಾರ ದೊರೆಯದೆ ಹೋದರೆ ಅದನ್ನು ನಡಿಸಲು ಸಾಧ್ಯವಾಗಲಿಕ್ಕಿಲ್ಲವಾದುದರಿಂದ ಮಹಾತ್ಮರನ್ನೂ, ರಾಜಕೀಯ ಕೈದಿಗಳನ್ನೂ ಬಿಡುಗಡೆ ಮಾಡಬೇಕೆಂದು ಸಪ್ರು ಜಯಕರವೇ ಮೊದಲಾದವರು ಸ್ಟೇಟ್ ಸೆಕ್ರೆಟರಿಯವರಿಗೆ ಮನದಟ್ಟು ಮಾಡಿರುವರು. ಇದನ್ನು ಜೆನ್ನಾಗಿ ಆಲೋಚಿಸುವದಾಗಿ ಸೆಕ್ರೆಟರಿಯವರ ಉತ್ತರವಾಗಿದೆ. ಸರ್ಕಾರದವರ 'ವೈಟ್ ಪೇಪರ್' ಎಂಬ ಪ್ರಕಟಣೆಯು ಫೆಬ್ರವರಿಯಲ್ಲಿ ಹೊರಡುವಾಗ್ಯೆ ಮಹಾತ್ಮರ ಬಿಡುಗಡೆಯಾಗುವದೆಂದು ಮೆ. ಯನ್. ಸಿ. ಕೆಲಕ್ಕಿರವರ ಹೇಳಿಕೆ. ಮುಂದೆ ಏನಾಗುವದೆಂದು ನೋಡಬೇಕಷ್ಟೆ.

---


## WANTED.

Candidates for Electrical Courses. Highest Successes in London Guilds examinations. Railfare paid. Rules on 3 anna stamps.

TECHNICAL INSTITUTE OF INDIA LTD., WARLI,
6—4 Bombay, 18.

ಯು೦. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ಕೆಥಬೀದಿ, ಮಂಗಳೂರು, ಇವರ

## ಅನುಭವ ಸಿದ್ಧ ಔಷಧಗಳು.

೧. **ಧಾತುಪುಷ್ಟಿ ಲೇಹ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ವ್ಯೋಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು. ಡಬ್ಬಿ 1ಕ್ಕೆ ರೂ. 2—8—0 3ಕ್ಕೆ ರೂ. 7—0—0.

೨. **ಅಶೋಕಾರಿಷ್ಟ ಮತ್ತು ಮೂತ್ರೆ**—ಹೆಂಗಸರ ಮುಟ್ಟುದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನಹೀನತೆ, ಮೂರ್ಛೆ, ಮಲಬದ್ಧತೆ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಗುಣಪಡಿಸುವದು. 1 ಬಾಟ್ಲಿ ಔಷಧಕ್ಕೂ, 1 ಡಬ್ಬಿ ಮೊತ್ರೆಗೂ ರೂ. 2—4—0; 2ಕ್ಕೆ ರೂ. 4—4—0.

೩. **ಮೇಹ ಕುಠಾರ**—ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0; 3ಕ್ಕೆ ರೂ. 7—0—0.

೪. **ಬಾಲಾಗ್ರಹ ಗುಟಿಕೆ**—ಬಾಲಾಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರು ಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧ. ಬಾಟ್ಲಿ ಒಂದಕ್ಕೆ ರೂ. 0—10—0. 3ಕ್ಕೆ ರೂ. 1—12—0. (52—13)


## ಕರ್ನಾಟಕ ಸಾಹಿತ್ಯ ಸಮ್ಮೇಳನ, ಮಡಿಕೇರಿ.

### ೧೪ನೇ ಅಧಿವೇಶನ.

### ಸ್ವಾಗತ ಗೀತೆ.

೧

ಒನ್ನಿರಿ ಕರ್ನಾಟಕ ಬಂಧುಗಳೇ,
ನಮ್ಮೀ ಕುಡುಮಲೆಗೆ
ಕೊಡಗಿನ ನಡುವಿನ ಗುಡ್ಡದ ಮೇಲ್
ರಾರಾಜಿಪ ಮಡಿಕೆರಿಗೆ,
ಬಲು ಬೆಡಗಿನ ಮೆಡಿಕೆರಿಗೆ.
ಒನ್ನಿರಿ ಕನ್ನಡ ಕವಿಗಳು, ವಾಗ್ಮಿಗ
ಳಿಂದದ ಬರಹಗರು,
ಒನ್ನಿರಿ ವೈಯಾಕರಣರು, ಗಾಯಕ
ವೃಂದವು, ನಟವರರು,
ಸೋದರಿಯರು, ವಿದುಷಿಯರು.

೨

ಪಾಳೆಯಗಾರರು ಕಟ್ಟಿದ ನಾಡಿ
ಕ್ಕೇರಿಯ ಸೃಷ್ಟಿವರರು
ಆಳಿದ ನಾಡಿದು ಮಹಾಂಗ್ಲೇಯರ
ವಶವಾಗಿಹ ನಾಡು,
ಈ ಕೊಡಗಿನ ಮಲೆನಾಡು.
ಇಲ್ಲೆಲ್ಲಿಯು ಹೆಗ್ಗಾಡಿನ ಕಾಟ,
ತಳನೀರಿನ ಓಟ,
ಎಲ್ಲಿಯು ಹಚ್ಚಗೆ ಕಂಗೊಳಿಸುವ ಹಿರಿ
ಒಯಲಿನ ಸವಿಸೋಟ,
ಆನಂದದ ಹೂದೋಟ.
ವಾಣೀರಮಣನ ಅಡುಂಬೊಲವಿದು,
ಸಿರಿಪತಿಯುದ್ಯಾನ,
ಗೌರೀವರನುತ್ಸಾಹದಿ ಬೀಡಿಯ
ನಾಡುವ ಕಾಸನವು,
ಮೇಣಾಂದ್ರನ ನಂದನವು.
ಇಲ್ಲಿಯ ಆಡವಿಗಳಲ್ಲಿವೆ ಆನೆಯು,
ಹುಲಿ, ಕರಡಿಯು, ಚಿರತೆ,
ಹುಲ್ಲೆಯ ಕರು, ಕೆನ್ನಾಯಿಯು, ಕಾಟಿಯು,
ಕಡವೆಯು, ಕಬ್ಬೆಕ್ಕ
ಬಿಲ್ಲಾಳ್ಗಳ ಮನದುಕ್ಕು !
ದಂತಿಯನುಸಿಯುವ ಹುಲಿಯನು ಸಿಗಿಯುವ
ಕೊಡವರ ನೆಲೆವೀಡು.
ಕತ್ತಿಯ ಕೋವಿಯ ಧರಿಸುವ ಕಲಿಗಳ
ಕಾವೇರಿಯ ನಾಡು;
ಇದು ಸಿಹಿ ಜೇನಿನ ಗೂಡು.
ಭತ್ತವು, ತೆತ್ತಳಿ, ಬಾಳೆಯು, ಮೆಣಸು,
ಕಾಫಿಯು, ಏಲಕ್ಕಿ,
ಸುತ್ತಲು ಬೆಳೆದುರಿ ಸೊಂಪಾಗಿರುವುದು
ಕೊಡವರ ಕಾಯಲ್ನಾಡು;
ಈ ಕನ್ನಡಿಗರ ನಾಡು.
ಬಡಗಲು ತೆಂಕಲು, ಹೇಮಾವತಿಯು
ತಾಮೂನುಜ ತೀರ್ಥ,
ಪಡುವಲು ತಲೆ ಕಾವೇರಿಯು, ಮೂಡಲು
ರಾಮಕ್ಷೇತ್ರವಿವೇ
ಬಲು ಪಾವನ ತೀರ್ಥಗಳು.

೩

ಸ್ವಾಗತವನು ನಿಮಗೀಗಳೆ ಒಯಸುವೆ
ವಾದರದಲಿ ನಾವು,
ಮೋದದಿ ಕರ್ನಾಟಕ ಸಮ್ಮೇಲನ
ಕಾರ್ಯವನನು ಗೊಳಿಸಿ,
ನಿಮ್ಮಯ ನೇಹವಗಳಿಸಿ.
ಮೂಜಣ, ಪಡುಣ, ಬಡಗಣ ಕನ್ನಡ
ನಾಡಿನ ಬುಧವರರೇ,
ಒನ್ನಿರಿ ಸ್ವಾಗತವಿಯಲು ಕಾದಿಹ
ಕೊಡಗಿನ ಮಡಿಕೆರಿಗೆ,
ನಡುನಾಡಿನ ಮಡಿಕೆರಿಗೆ

ಳ

ಮಂಗಳವೀಯಲಿ ಓಂಕಾರೇಶನು
ಪರಿಷನ್ಮಂಡಲಕೆ!
ಮಂಗಳವೀಯಲಿ ಸಿರಿಗನ್ನಡ ಸ
ಮ್ಮೇಲನ ಸಂಭ್ರಮಕೆ!
ಶ್ರೀನಿಲಯನ ಬಲದೊರಕೆ.

ಜಿ. ಶ್ರೀನಿವಾಸಮೂರ್ತಿ.

---

## ಕೆಗ್ಗಟ್ಟುನಾಡು ಹರಿಜನರ ವಿೂಟಿಂಗು.

ಎಂಡು ವಾರದ ಹಿಂದೆ ಪ್ರಕಟಿಸಿದ್ದಂತೆ ಕೆಗ್ಗಟ್ಟುನಾಡು ಹರಿಜನರ ಜನರಲ್ ವಿೂಟಿಂಗು ತಾ. 19ರಲ್ಲು ಜರುಗಿಸಲು ಕೆಲವು ಅನಾನುಕೂಲಗಳಿದ್ದುದರಿಂದ ತಾ. 26ನೇ ಸೋಮವಾರ ಪೊನ್ನಂಪೇಟೆ ಮಹಾಜನ ಶಿಕ್ಷಣ ಸಂಘದ ಪ್ರೆಸಿಡೆಂಟರಾದ ಸ್ವಾಮಿ ಶಾಂಭವಾನಂದರವರ ಅಧ್ಯಕ್ಷತೆಯಲ್ಲಿ ನಡೆಯಿಸಲಾಯಿತು. ಸುಮಾರು ಎಂಬತ್ತು ಹರಿಜನರೂ ಕೆಲವು ಮೇಲ್ಜಾತಿಯವರೂ ಹಾಜರಿದ್ದರು. ಎಲ್ಲಾ ಕಡೆಯಲ್ಲಿ ಕುಯಿಲು ಕೆಲಸ ಸುರುವಾಡಿರುವುದರಿಂದ ಕೆಲವರು ಹಾಜರಿರಲು ಸಾಧ್ಯವಾಗಿಲ್ಲ. ಒಂದೆರಡು ಗ್ರಾಮಗಳಲ್ಲದೆ ಬೇರೆ ಎಲ್ಲಾ ಗ್ರಾಮಗಳಿಂದಲೂ ಮುಖ್ಯಪಟ್ಟ ಹರಿಜನರು ಹಾಜರಿದ್ದರು.

ಕಳೆದ ವಿೂಟಿಂಗಿನಲ್ಲಿ ಒಪ್ಪಿದಂತೆ ಸಂಘವೊಂದನ್ನು ಸ್ಥಾಪಿಸುವಂತೆ ನಿಶ್ಚಯನಾಡಿ ಮೆಂಬರಾಗಿಲು 18 ವಯಸ್ಸಿನ ಮೇಲ್ಪಟ್ಟ ಎಲ್ಲಾ ಗಂಡಸರು ವರ್ಷಕ್ಕೆ 8 ಆಣೆಯಂತೆ ಚಂದಾ ಕೊಡುವುದು ಕಷ್ಟವೆಂದು ತೀರ್ಮಾನಿಸಿದುದರಿಂದ ತಲಾ 2 ಆಣೆಗೆ ಇಳಿಸಲಾಯಿತು. ಆ ಮೇರೆ 111 ಹರಿಜನರು ಮೆಂಬರಾಗಿ ಚಂದಾ ವಸೂಲಿ ಮಾಡಿದರು. ವೇಲ್ಜಾತಿಯವರನ್ನು ಸಹ ಈ ಸಂಘಕ್ಕೆ ಪೋಷಕರಾಗಿಯೂ, ಪ್ರೋತ್ಸಾಹಕರಾಗಿಯೂ ಇರಲು ಸೂಚಿಸಲು ಮೆ. ಪಿ. ಜೆ. ವಿ. ಎದ್ದಮಯ್ಯನವರೂ ಮೆ. ಸಿ. ಯಸ್. ಪೂವೈಯ್ಯನವರೂ ಐನೈದು ರೂಪಾಯಿಗಳಂತೆಯೂ ಮೆ. ಮೂಚಂಗಡ ಸಬ್ಬೆಯ್ಯನವರು ಎಂಡು ರೂಪಾಯಿಗಳನ್ನೂ ವಾಗ್ದಾನ ನೂಡಿದರು. ಹರಿಜನರ ಪೈಕಿ ಚಿಕ್ಕ ಮಂಡೂರು ಪುಟ್ಟ ಒಂದು ರೂ. ಕೊಟ್ಟರು. ಇನ್ನೂ ಇರತಕ್ಕ ಹರಿಜನರುಗಳನ್ನು ಮೆಂಬರುಗಳಾಗಿಲು ಹೇಳುವಂತೆಯೂ, ಈ ಸಂಘದ ಫಂಡನ್ನು ಬೆಳೆಸಲು ಇತರ ರೀತಿ ಹಣ ವಸೂಲಿಗೆ ಪ್ರಯತ್ನಿಸುವಂತೆಯೂ ಆಲೋಚಿಸಿದ್ದಾಯಿತು. ಈ ಹಣವನ್ನು ಸಂಘದ ಸೆಕ್ರಟರಿಯವರ (ಮೆ. ಪಿ. ಜೆ. ಮುದ್ದಮೆಯ್ಯನವರ) ಹೆಸರಿನಲ್ಲಿ ಸೇವಿಂಗ್ಸ್ ಬ್ಯಾಂಕಿನಲ್ಲಿಡುವಂತೆ ನಿಶ್ಚಯವಾಯಿತು.

ಮಧ್ಯವರ್ತಿ ಸಂಘ ಒಂದಲ್ಲದೆ ಇನ್ನೂ ಹರಿಜನರ ಗುಂಪು ಇರುವ ಕಡೆಗಳಲ್ಲಿ ಉಪ ಸಂಘಗಳನ್ನು ಕಲ್ಪಿಸಿಕೊಂಡು ಆಯಾಯ ಗ್ರಾಮಗಳ ಏಳಿಗೆಗೆ ಕೆಲಸ ಮಾಡುವಂತೆಯೂ ಇದಕ್ಕೆ ಮೆಧ್ಯವರ್ತಿ ಸಂಘದ ಅಧ್ಯಕ್ಷರೂ ಕಮಿಟಿ ಮೆಂಬರುಗಳೂ ಸಹಾಯ ಮಾಡುವಂತೆಯೂ ತೀರ್ಮಾನವಾಯಿತು. ಹೊಸದಾಗಿ ಕಮಿಟಿ ಮೆಂಬರುಗಳಾಗಿರಲು ಮೆ. ಮೂಚಂಗಡ ಸುಬ್ಬೆಯ್ಯನವರು ಒಪ್ಪಿಕೊಂಡರು.

ಅಲ್ಲದೆ ಈ ಕೆಳಗೆ ವಿವರಿಸಿದಂತೆ ಸಂಘದ ಕಾರ್ಯ ಉದ್ದೇಶಗಳು ಸರ್ವಮತದಿಂದ ನಿಶ್ಚಯವಾಯಿತು.

### ಸಂಘದ ಹೆಸರು.

"ಕೆಗ್ಗಟ್ಟುನಾಡು ಆದಿ ಹಿಂದೂ ಸಂಘ"

### ಸಂಘದ ಉದ್ದಿಶ್ಯ.

ಕೆಗ್ಗಟ್ಟುನಾಡಿನ ಹರಿಜನರ ಸಾಮಾಜಿಕ, ಆಚಾರ, ವಿದ್ಯ, ಆರ್ಥಿಕಾಭಿವೃದ್ಧಿಗೆ ಕೆಲಸ ಮಾಡುವುದು.

### ಸಂಘದ ಕಾರ್ಯ.

ಸಾಮಾಜಿಕ ಮತ್ತು ಆಚಾರಾಭಿವೃದ್ಧಿಗೆ—ಸತ್ತ ಪ್ರಾಣಿಗಳನ್ನು ತಿನ್ನದ ಇರುವುದು—ಮದ್ಯಪಾನ ನಿಷೇಧ, ಹಳ್ಳಿ ಗುಡಿಸಲು ಅಂಗಳಗಳನ್ನು ಚೊಕ್ಕಟವಾಗಿಡುವುದು, ಮೈ ಬಟ್ಟೆ ವಗೈರೆ ಶುದ್ಧವಾಗಿಟ್ಟುಕೊಳ್ಳುವುದು ಇತ್ಯಾದಿವುಗಳನ್ನು ಸಾಧಿಸುವುದು.

ವಿದ್ಯಾಭಿವೃದ್ಧಿಗೆ—ಹೊಲೆಯರ ಹುಡುಗರು ಶಾಲೆಗೆ ಹೋಗುವಂತೆ ಪ್ರೋತ್ಸಾಹಿಸುವುದು—ದೊಡ್ಡವರಿಗೆ ಹರಿಕಥೆ, ಭಜನೆ, ನಾಟಕ, ಮೂಯೊಲಾಂದ್ರಗಳ ಮುಖಾಂತರ ತಿಳುವಳಿಕೆಯನ್ನು ಹೆಚ್ಚಿಸುವುದು ಇತ್ಯಾದಿ.

ಆರ್ಥಿಕಾಭಿವೃದ್ಧಿಗೆ—ಈಗಿರತಕ್ಕ ಕೈಕಸಬುಗಳಿಗೆ ಪ್ರೋತ್ಸಾಹಿಸುವುದು—ಇತರ ಹೊಸವುಗಳನ್ನು ಕ್ರಮೇಣ ಕಲಿಸುವುದು. ಪರಸ್ಪರ ಸಹಾಯಕ ಸಂಘಗಳನ್ನು ಸ್ಥಾಪಿಸುವುದು, ವಾಸಿಸಲು ತಕ್ಕಂತೆ ಮನೆಗುಡಿಸಲುಗಳನ್ನು ಕಟ್ಟಲು ಸಹಾಯ ಮಾಡುವುದು, ಇತ್ಯಾದಿ.

ಈ ಸಂಘದ ಅಭಿವೃದ್ಧಿಗೆ ಇನ್ನೂ ಇತರ ವಿಧಾನಗಳಲ್ಲಿ ಕೆಲಸ ಮಾಡುವುದು.

ಈ ಸಂಘದ ಕಾರ್ಯಗಳನ್ನು ನಡೆಸಿಕೊಂಡು ಬರಲು ಒಂದು ಕಾರ್ಯನಿರ್ವಾಹಕ ಸಮಿತಿ ಇರತಕ್ಕದ್ದು. ಇದರ ವಿಷಯ ಇನ್ನೊಂದು ವಿೂಟಿಂಗಿನಲ್ಲಿ ಇನ್ನೂ ವಿವರವಾಗಿ ನಿಶ್ಚಯಿಸಲಾಗುವುದು.

ಇತರ ವಿಷಯಗಳನ್ನು ಕುಯಿಲು ಕೆಲಸ ತೀರಿದ ನಂತರ ಇನ್ನೊಂದು ಜನರಲ್ ವಿೂಟಿಂಗಿಗೆ ಇಡಲಾಯಿತು. ಇನ್ನೊಂದು ವಿೂಟಿಂಗಿನೊಳಗೆ ಮುಂದಿನ ಕಾರ್ಯಕ್ಕೆ ಸಹಾಯಕವಾಗುವಂತೆ ಕೆಗ್ಗಟ್ಟುನಾಡಿನ ಹರಿಜನರ ಒಂದು ಖಾನೇಸುಮಾರಿಯನ್ನು ತಯ್ಯಾರಿಸುವಂತೆ ನಿಶ್ಚಯವಾಯಿತು.

ಅಂತ್ಯದಲ್ಲಿ ಪರಸ್ಪರ ವಿಶ್ವಾಸಪೂರ್ವಕ ಹರಿಜನರ ಅಧ್ಯಕ್ಷರ, ಕವಿ.ಟಿ ಮೆಂಬರುಗಳ ಭಾಷಣಗಳಾದ ನಂತರ ಪ್ರಸಾದ ಹಂಚಿ ವಿೂಟಿಂಗು ಬರಕಾಸ್ತಾಯಿತು.

ಹಗಲಿರುಳು ದುಡಿದರೂ ಹೆಟ್ಟಿಗೆ ಸಾಕಾಗದೆ ದಾರಿದ್ರ್ಯದಲ್ಲಿಯೂ, ಅಜ್ಞಾನದಲ್ಲಿಯೂ, ಆಚಾರವಿಹೀನನಾಗಿಯೂ ಬಿದ್ದಿರುವ—ಪಂಚಮ್ಮ ಸ್ವರೂಪಿಗಳಾದ ಮಾನವರನ್ನು ಉದ್ಧರಿಸಲು ಮೇಲ್ಜಾತಿಯವರೆಲ್ಲರೂ ಶರಣು ಹೃದಯದಿಂದ ಉದಾರ ಸಹಾಯವನ್ನು ಮಾಡಬೇಕಾಗಿ ವಿನಯಪೂರ್ವಕ ಕೇಳಿಕೊಳ್ಳುತ್ತೇವೆ

ಪಿ. ಜಿ. ಮುದ್ದಮೆಯ್ಯ,
(ಸೆಕ್ರೆಟರಿ.)

---

## ಪತ್ರವ್ಯವಹಾರ.

[ಚಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

### ಸರ್ವಪಕ್ಷೀಯ ಪರಿಷತ್ತು.

ತಾ. 18—12—32ರಲ್ಲಿ ಕೊಡಗು ಜಮೀನ್ದಾರರ ಸಂಘದ ಹಾಲಿನಲ್ಲಿ ನಡೆದ ಸರ್ವ ಪಕ್ಷೀಯ ಪರಿಷತ್ತಿನಲ್ಲಿ (All Parties Conference) ಕೊಡಗಿನ ಭವಿಷ್ಯತ್ತಿನ ವಿಷಯ ಸರ್ವ ಸಮ್ಮತದಿಂದ ತೀರ್ಮಾನವಾದ ಠರಾವು. ಇತರ 2 ಠರಾವುಗಳು ಸಹ ಕೊಡಗಿಗೆ ಸಂಬಂಧದಲ್ಲಿ ಅತ್ಯವಶ್ಯಕವಾದ ವಿಷಯಗಳಾಗಿವೆ ಕೊಡಗಿನಲ್ಲಿರುವ ಗಜೆಟೆಡ್ ಮತ್ತು ನಾನ್ ಗಜೆಟೆಡ್ ಉದ್ಯೋಗಸ್ಥರಿಗೆ ಅವರ ಸರ್ವಿಸ್ ತುಂಬಿದ ನಂತರ ಯಾವ ಕಾರಣಗಳಿಂದಲೂ ಅವರ ಸರ್ವಿಸನ್ನು ಮುಂದರಿಸ (Extension) ಬಾರದೆಂತ ತೀರ್ಮಾನಿಸಿದ ಠರಾವನ್ನು ಸರ್ವರೂ ಒಪ್ಪತಕ್ಕ ವಿಷಯವಾಗಿದೆ. ಸರ್ವಿಸು ತುಂಬಿದ ನಂತರ ಪುನಹ ಮುಂದರಿಸಿವುದು ಸಿಬ್ಬಂದಿಹೋತೆಯ ತತ್ವಕ್ಕೂ ಆಡಳಿತದ ತತ್ವಗಳಿಗೂ, ಸಾರ್ವಜನಿಕ ವಿರೋಧವೆಂದಾಗಿದೆ. ಕೊಡಗಿನಲ್ಲಿ ಉದ್ಯೋಗಸ್ಥರ ಅದರಲ್ಲೂ ಗಜೆಟೆಡ್ ಉದ್ಯೋಗಸ್ಥರ ಸರ್ವಿಸನ್ನು ಮುಂದರಿಸುವುದು. ಸ್ಥಳೀಯ ಸರ್ಕಾರದವರಿಗೆ ಹೊಸ ವಿಷಯವಲ್ಲ. ಆದುದರಿಂದಲೇ ಸರ್ವ ಪಕ್ಷೀಯ ಪರಿಷತ್ತಿನಲ್ಲಿ ಕೊಡಗಿನ ಮಹನೀಯರು ಸಮಯವನ್ನು ಕಳಕೊಳ್ಳಿಗೆ, ದೇಶದ ಮನೋಭಿಪ್ರಾಯವನ್ನು ಕಂಠೋಕ್ತವಾಗಿ ತೋರಿಸಿದ್ದಾಗಿದೆ. ಅಲ್ಲದೆ ಈಗಿನ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರು ಒರುಂ ಮೂರ್ಜಿ ತಿಂಗಳಲ್ಲಿ ಅವರ ಸರ್ವಿಸನ್ನು ಮುಂಗಿಸಿ ಉದ್ಯೋಗದಿಂದ ನಿವೃತ್ತರಾದರೆ, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಉದ್ಯೋಗವನ್ನು ತೆಗೆದು ಹಾಕಬೇಕೆಂತ ತೀರ್ಮಾನಿಸಿದ ಠರಾವು ಸಹ ಅನೇಕ ಕಾರಣಗಳಿಂದ ನಮ್ಮ ದೇಶಕ್ಕೆ ಒಳ್ಳೆಯದೆಂತ ಹೇಳಬೇಕಾಗಿದೆ. ಈಗಿನ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರಿಗೆ ನಾಳ್ಕೈದು ತರದ ಅಧಿಕಾರಗಳು ಒಬ್ಬನಲ್ಲಿ ಸೇರಿಕೊಂಡಿರುವುದರಿಂದ ಕೊಡಗಿನ ಜನರ ಸ್ವತಂತ್ರ ಬೆಳವಣಿಗೆಗೆ ಎಂದೂ ಕ್ಷೇಮವಿಲ್ಲ. ಆದ್ದರಿಂದ ಆ ಉದ್ಯೋಗವನ್ನು ತೆಗೆದು ಹಾಕಿ, ಅವರ ಅಧಿಕಾರವನ್ನು ಎಸ್ಕ್ಯೂ ಉದ್ಯೋಗಸ್ಥರಲ್ಲಿ ಹಂಚಬೇಕೆಂತ ತೀರ್ಮಾನಿಸಿದ್ದಾಗಿದೆ. ಕೊಡಗಿನ ಕಮಿಷನರವರೇ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾಗಿ, ಕವಿಷನರವರೆ ಡಿಸ್ಟ್ರಿಕ್ಟ್ ಮತ್ತು ಸೆಶನ್ ಜಡ್ಜರ ಉತ್ತರ ಮಲಬಾರಿನ ಅಥವಾ ದಕ್ಷಿಣ ಕನ್ನಡ ಜಿಲ್ಲೆಯ

ಸ್ಪೆಷಲ್ ಮತ್ತು ಸೆಶನ್ ಜಡ್ಜಿಯವರಿಗೆ ಕೊಟ್ಟು ಕೊಡಗಿನಲ್ಲಿ ತಿಂಗಳಿಗೊಂದಾವೃತ್ತಿ ಮಡಿಕೇರಿಯಲ್ಲಿ ಕೋರ್ಟು ನಡುವ ಹಾಗೂ, ಅವರಿಗೆ ಮೂಹೆಯೂನ 150 ಯೂ 200 ರೂ. ಬತ್ತೆ ಕೊಟ್ಟದ್ದೇ ಆದರೆ ಕೊಡಗಿಗೆ ಅನುಭವಶಾಲಿಯೂದ ಮತ್ತು ಸಿವಿಲ್ ಖಾನೂನು ಚೆನ್ನಾಗಿ ತಿಳಿದ ಡಿಸ್ಟ್ರಿಕ್ಟ್ ಜಡ್ಜಿಯವರು ಕೊಡಗಿಗೆ ದೊರೆತ ಹಾಗಾಗುತ್ತದೆ. ಅಲ್ಲದೆ ದೊಡ್ಡ ಉದ್ಯೋಗಸ್ಥರನ್ನು ಒಂದೇ ಸ್ಥಳದಲ್ಲಿ ಇಟ್ಟುಕೊಳ್ಳಬಾರದೆಂಬ ಬ್ರಿಟಿಷ್ ಅಧಿಕಾರಿಗಳೇ ಒಪ್ಪುವ, ನ್ಯಾಯವಾದ ತತ್ವವನ್ನು ಸ್ವಲ್ಪ ಮಟ್ಟಿಗಾದರೂ ಜಾರಿಗೆ ತಂದಹಾಗಾಗುತ್ತದೆ.

ಅಲ್ಲದೆ ಈಗ ಇರುವ ಅಬ್ಕಾರಿ ಇನ್‌ಸ್ಪೆಕ್ಟರವರ ಉದ್ಯೋಗವನ್ನು ತೆಗೆದು ಹಾಕಿ, ಸಹಕಾರಿ ಸಂಘಗಳ ರಿಜಿಸ್ಟ್ರಾರವರ ಕೆಲಸವನ್ನು ಮತ್ತು ವ್ಯವಸಾಯ ಇಲಾಖೆಯ ಡಿಪ್ಯೂಟಿ ಡೈರೆಕ್ಟರ ಕೆಲಸಕ್ಕೂ ಮತ್ತು ಪಶು ವೈದ್ಯ (ವೆಟರಿನರಿ) ಇಲಾಖೆಯ ಆಡಳಿತಕ್ಕೂ, ಮೂಹೆಯೂನ 200—300 ರೂ. ಗಳ ಸಂಬಳವಿರುವ ಒಂದು ಉದ್ಯೋಗವನ್ನು ಉಂಟು ಮಾಡಿ, ಈ ಕೆಲಸಗಳಿಗೆ ನ್ಯಾಯವಾದ ಮೂಹಿತಿ ಹೊಂದಿದ ಉದ್ಯೋಗಸ್ಥನನ್ನು ನೇಮಕ ಮಾಡಲು ಸದ್ಯದಲ್ಲೇ ಸಿಕ್ಕದಿದ್ದರೂ ಸಹ ಹಾಲಿ ಇರುವ ಇಬ್ಬರು ಸುಭೇದಾರುಗಳಲ್ಲಿ ಒಬ್ಬನನ್ನಾಗಲೀ ಯೂ ಅಬ್ಕಾರಿ ಇನ್ಸ್‌ಪೆಕ್ಟರ್ ಕೆಲಸದಿಂದ ನಿವೃತ್ತಿ ಹೊಂದುವ ಉದ್ಯೋಗಸ್ಥನನ್ನಾಗಲೀ ನೇಮಕ ಮಾಡಲು ತುಂಬಾ ಅನುಕೂಲವಿದೆ. ಲ್ಯಾಂಡ್ ರಿಕಾರ್ಡ್ಸ್ ಡೆಪ್ಯೂಟಿ ಡೈರೆಕ್ಟರನ್ನು ಅಸಿಸ್ಟೆಂಟ್ ಕಮಿಶನರಾಗಿಯೂ ಇನ್‌ಕಮ್‌ಟೇಕ್ಸ್ ಆಫೀಸರಾಗಿಯೂ, ಅಬ್ಕಾರಿ ಅಸಿಸ್ಟೆಂಟ್ ಕಮಿಶನರಾಗಿಯೂ ಮತ್ತು ಕೊಡಗು ನ್ಯಾಯವಿಧಾಯಕ ಸಭೆಯ ಸೆಕ್ರೆಟರಿಯೂ ಗಿಯೂ, ಮೂಹೆಯೂನ 300—450 ರೂಪಾಯಿಗಳ ಸಂಬಳದಲ್ಲಿ ನೇಮಿಸಿದುಲ್ಲಿ, ಆಡಳಿತವನ್ನು ನ್ಯಾಯವಾಗಿ ನಡಿಸಿಕೊಂಡು ಹೋಗಲು ಯಾವ ಅಭ್ಯಂತರವೂ ಇಲ್ಲ.

ಕೊಡಗು ಕಮಿಶನರಲ್ಲಿ ಆಡಗಿರುವ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಅಧಿಕಾರವನ್ನು ತೆಗೆದು, ಚೀಫ್ ಕಮಿಶನರ್ ಸಾಹೇಬರ ಸೆಕ್ರೆಟರಿಯವರಿಗೆ ಕೊಟ್ಟು ಈಗ ಇರುವ ಪೊಲೀಸ್ ಸುಪರಿಂಟೆಂಡೆಂಟರನ್ನೇ ಪೊಲೀಸು ಸುಪರಿಂಟೆಂಡೆಂಟರಾಗಿ ನೇಮಿಸಿದರೆ ಕೊಡಗಿನಲ್ಲಿ ಈಗ ಇರುವ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಸರ್ವ ಅಧಿಕಾರಗಳನ್ನು ವಿಂಗಡಿಸಿ, ನ್ಯಾಯತೀರ್ಪಿನ ಅಧಿಕಾರಗಳಿಂದ (Judiciary) ಆಡಳಿತದ (Executive) ಅಧಿಕಾರಗಳನ್ನು ಬೇರೆ ಮಾಡಬೇಕೆಂಬುವ ತತ್ವವನ್ನು ಒಹಳ ಮಟ್ಟಿಗೆ ಜಾರಿಗೆ ತಂದಂತಾಗುವುದು.

ಈ ಮೇಲ್ಕಂಡ ಬದಲಾವಣೆಗಳನ್ನು ಹಾಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರು ಉದ್ಯೋಗದಿಂದ ನಿವೃತ್ತರಾದ ಕೂಡಲೆ ಜಾರಿಗೆ ತರಬೇಕೆಂತೆಲೇ ಸರ್ವ ಪಕ್ಷೀಯ ಪರಿಷತ್ತಿನ ತೀರ್ಮಾನದ ಉದ್ದಿಶ್ಯವಾಗಿದೆ. ಅಲ್ಲದೆ ಈ ಬದಲಾವಣೆಗಳಿಂದ ಕೊಡಗಿನ ಈಗಿನ ಉತ್ಪತ್ತಿಯ ಹೀನ ಸ್ಥಿತಿಯಲ್ಲಿ ವರ್ಷಾವಧಿ ಅಂದಾಜು 8000 ರೂಪಾಯಿಯನ್ನಾದರೂ ಉಳಿಸಿದಂತಾಗುವುದು ಸ್ಥಳೀಯ ಸರಕಾರದ ಮೇಲಧಿಕಾರಿಗಳು ಕೊಡಗಿನ ಜನರ ಹಿತವನ್ನು ಬಯಸುತ್ತಾರೆಂತ ಹೇಳುವುದು ನಿಜವಾದದ್ದಾದರೆ ಈ ಬದಲಾವಣೆಗಳನ್ನು ಕೂಡಲೆ ಜಾರಿಗೆ ತರುವುದು ಅವರ ಕರ್ತವ್ಯವಾಗಿದೆ. ಈ ಸುಧಾರಣೆಗಳನ್ನು ಕೊಡಗಿನ ಭವಿಷ್ಯತ್ತಿನ ಪ್ರಶ್ನೆಯ ಸಂಗಡ ತೀರ್ಮಾನ ಮಾಡ ಒಹುದು ಎಂತ ಸ್ಥಳೀಯ ಸರ್ಕಾರದವರು ಅಭಿಪ್ರಾಯಪಡುವುದಾದರೆ ದೇಶದಲ್ಲಿ ಅಸಮಾಧಾನವು ಖಂಡಿತ ಹೆಚ್ಚಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಕೊಡಗಿನ ಭವಿಷತ್ತು ನ್ಯಾಯವಾದ ತೀರ್ಮಾನಕ್ಕೆ ಬರಲು ಒಂದೆರಡು ವರ್ಷಗಳಾಗಬಹುದು. ಅಷ್ಟರ ವರೆಗೆ ಈ ಬದಲಾವಣೆಗಳನ್ನು ಜಾರಿಗೆ ತಂದಲ್ಲು ದೇಶದಲ್ಲು ತುಂಬಾ ತೃಪ್ತಿಯುಂಟಾದೀತು. ಸರ್ಕಾರದವರು ಉದಾಸೀನ ಮಾಡಿದಲ್ಲು, ದೇಶದಲ್ಲಿ ಅಸಮಾಧಾನಕ್ಕೆ ಅವರೇ ಉತ್ತೇಜನ ಕೊಟ್ಟಂತಾಗುವುದೆಂತ ನಮ್ಮ ಸರ್ಕಾರದವರು ಚೆನ್ನಾಗಿ ತಿಳಿದಿರಲಿ ಈ ವಿಷಯದಲ್ಲಿ ಸ್ಥಳೀಯ ಸರ್ಕಾರದವರು ಹೇಗೆ ವರ್ತಿಸುತ್ತಾರೆಂತ ಕೊಡಗು ದೇಶದ ಸರ್ವರೂ ಕುತೂಹಲದಿಂದ ನಿರೀಕ್ಷಿಸುತ್ತಾ ಇದ್ದಾರೆ.

"ಆಲೋಚಕ."


೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

# ಕರ್ಕ ಕಂಪನಿ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕ,
ಮತು ಕಂಪನಿ,
ಗಿರಗಾಂವ, ಮುಂಬಯಿ,
(52—19)



# ಇಂಡಿಯಾ ಎಕ್ಸ್‌ಟೇಬಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಕಳೆದ ವರ್ಷದ ಫಲಿತಾಂಶಗಳು.

ಹಿಂದಿನ ವರ್ಷದ ಕೆಲಸಕ್ಕಿಂತ 64% ಹೆಚ್ಚು.

ಕಳೆದ ವರ್ಷ ಸಂಭವಿಸಿದ ಹಕ್ಕು ಬಾಧ್ಯಸ್ಥರಲ್ಲಿ ಶೇಕಡ 966 ಜನರಿಗೆ ಹಣ ಅದೇ ವರ್ಷ ಕೊಡಲಾಗಿದೆ.

ಖರ್ಚಿನ ದಾಮು ಶಾಯಿ 31% ಮಾತ್ರ.

ಇಂಡಿಯಾ ಎಕ್ಸ್‌ಟೇಬಲ್ ಇನ್ಶೂರೆನ್ಸ್ ಕಂಪೆನಿಯು ಬುಡದಿಂದ ತಲೆಯ ವರೆಗೂ ಇಂಡಿಯನೇ.

ವಜನದಾರರಾದ ಏಜೆಂಟರುಗಳು ಬೇಕಾಗಿದ್ದಾರೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೆ. ಇ. ಚಾಕೊ,
ಬ್ರಾಂಚ್ ಸೆಕ್ರೆಟರಿ,
159 ಶ್ರೀ ನರಸಿಂಹರಾಜ ರೋಡ್,
ಬೆಂಗಳೂರು ಸಿಟಿ.

ಅಥವಾ

(1) ಮಿಸ್ ಸಿ. ಯಂ. ಪೂವಯ್ಯ,
ಲೇಡಿ ಆರ್ಗನೈಸರ್,
'ಪೂವಯ್ಯ ವಿಲ್ಲಾ,'
ಮಡಿಕೇರಿ.

(2) ಯಂ. ಸಿ. ಅಪ್ಪಚ್ಚು,
ರಿಟಯರ್ಡ್ ಪಾರುಪತ್ಯಗಾರ್,
ಹಿಲ್ ರೋಡ್,
ಮಡಿಕೇರಿ.

(12—4)



# GOVERNMENT SOAP FACTORY,

## Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.
52—16

# ಪ್ರಕಟಣೆ.

**"ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್" ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.**

(ಸ್ಥಾಪಿತವಾದದ್ದು 1922ದಲ್ಲಿ)

| | | ರೂ. |
|---|---|---|
| ಶೇರ್ ಬಂಡವಾಳ | — | 50,000— 0—0 |
| ವಸೂಲಾದ ಶೇರ್ ಮೊಬಲಗು | — | 27,670— 0—0 |
| ಜಮೆಬಂದ ಠೇವಣಾತಿ | — | 23,150—13—9 |
| ವಸೂಲಾದ ಕ್ಷೇಮನಿಧಿ | — | 45,868—14—0 |

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಸ್ಥೆಗಳಿಗೇನೇ ಹೆಚ್ಚಾಗಿ ಸಾಲಕೊಡಕ್ಕಾಗುವುದು.

ಒಂದು ವರ್ಷ ವಾಯಿದೆ ಅಥವ ಜೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡೆ ಸಾಲಿಯಾನ ರೂ. 5-0-0ರ ಪರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪೈಸಿಡೆಂಟರು,
ಪಟ್ಟವಾಡ ದೇವೈಯ್ಯನವರು,
ರಾವ್ ಬಹದ್ದೂರ್.

ಟ್ರೈಜರರ್
ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ
ಪಿ. ಯನ್. ವೆಂಕಸ್ವೈಯ್ಯನವರು, ಬಿ.ಎ., ಬಿ.ಎಲ್.

ತಾರೀಕು 1—7—1932.

---

## ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಸೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಸೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪೂರ್ತಿ ಮಾಡಿ ರಸೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮಂಡೆಪಂಡ ಯಂ. ಚಿಣ್ಣಪ್ಪನವರು.

ಉತ್ತರ ಕೊಡಗಿಗೆ ಮೆ. ಚಾರಿಂ ಮೊದ್ದಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮೆಯ್ಯನವರು, (ಖಾದಿಭಂಡಾರ.)

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮೂಡಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜೆ. ಮುದ್ದಯ್ಯನವರ ಮತ್ತು, ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ. ಜೆ. ಮೂದಯ್ಯನವರು
ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮಾಚಯ್ಯನವರು,

ಸೂಚನೆ:—ಪ್ರಿಂಟು ಆದ ರಸೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

---

## ಮೂರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನ್ನಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಾಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಡಿಗನು ಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಸೀತಿ ಪುಸ್ತಕಗಳೂ, ಜಮೆ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬರಲಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

---


ಸರಕಾರಿ ಭದ್ರತೆ ಇರುವ

# ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮೊಬಲಗು 1,78,322 ಜನರಿಗೆ 38ಕೋಟಿ ರೂ.

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ಎಂದಿದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿಚ್ಚು ಒತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆದು ಬರುತ್ತಿದೆ

ಎಂಬದು ಆದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು
ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

| | | | | |
|---|---|---|---|---|
| ಆಗ್ರ | ಕಲ್ಕತ್ತಾ | ಕೌಲಾಲಂಪೂರು | ಪೊಂಬಾಸ | ರಂಗೂನು |
| ಅಹ್ಮದಾಬಾದು | ಕೊಲಂಬೊ | ಲಾಹೋರ್ | ನಾಗಪುರ | ರಾವಲ್‌ಪಿಂಡಿ |
| ಅಜ್ಮೀರ್ | ಡಕ್ಕಾ | ಲಕ್ನೌ | ಪಾಟ್ನಾ | ಸುಕ್ಕೂರು |
| ಅಲ್ಲಾಹಾಬಾದು | ಡೆಲ್ಲಿ | ಮದ್ರಾಸು | ಪೂನಾ | ತಿರುಚಿನಾಪಳ್ಳಿ |
| ಬೊಂಬಾಯಿ | ಡಾಲಗಾನ್ | ಮಂಡಲೆ | ರಾಯಪುರ | ತಿರುವೆಂಡ್ರಮ್ |
| ಭೋಪಾಲ್ | ಕರಾಚಿ | ಮಡಿಕೇರಿ | ರಾಂಚಿ | ವಿಶಾಖಪಟ್ಣ [52—43 |

---

ಸಣ್ಣ ಹುಡುಗರ ಸಲುವಾಗಿ

# ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಿಗಾಂವ, ಮುಂಬಯಿ.

52-50



ಕಾಡು ಬೆದರಿ ಹಾಗಿನ ಕ್ಯಾಟಲಾಗು ಮೂಫಯವಾಗಿ ಕಳುಹಿಸಲ್ಪಡುವುದು.

ಕೋವಿಗಳು, ಕತ್ತಿಗಳು, ಬಚ್ಚಿಗಳು, ತೋಟಗಳು, ಕೇಪ್ಸುಗಳು, ಮದ್ದು ಮತ್ತು ಬೇಟೆಯ ಎಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,
Largest Importers of Firearms and Ammunition
Cheapest priced firm in India,
26—16 210 Abdul Rehiman Street, BOMBAY.


---

Printed & published by P. I. Belliappa at "Kodagu" Press, Mercara for "Kodagu" Ltd